KAGD400005382019

**<u>ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ರೋಣ</u>**

**ಉಪಸ್ಥಿತಃ ಶ್ರೀ.ಮಹದೇವಪ್ಪ.ಹೆಚ್. ಬಿ.ಎ., ಎಲ್.ಎಲ್.ಬಿ.,**
**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರೋಣ**

**ದಿನಾಂಕ 17 ನೇ ಜೂನ್ ಮಾಹೆ 2026**
**<u>ಅಸಲು ದಾವಾ ಸಂಖ್ಯೆಃ 68/2019</u>**

**<u>ವಾದಿಃ</u>** ಶಿವಾನಂದಪ್ಪ ತಂದೆ ಯಮನಪ್ಪ ಕುರಿ,
ವಯಾಃ 67 ವರ್ಷ, ಉದ್ಯೋಗಃ ನಿವೃತ್ತ ನೌಕರ,
ಸಾಃ ರೋಣ, ತಾಃ ರೋಣ, ಜಿಃ ಗದಗ.

**(ವಾದಿ ಪರ, ಶ್ರೀ ಪಿ.ಕೆ.ಉಡುಪಿ., ವಕೀಲರು)**

**<u>:: ವಿರುದ್ಧ ::</u>**

**<u>ಪ್ರತಿವಾದಿಯರುಃ</u>**

1. ಶಿವಗಂಗವ್ವ ಕೋಂ ವೀರಭದ್ರಪ್ಪ ಕುರಿ,
ವಯಾಃ 60 ವರ್ಷ, ಉದ್ಯೋಗಃ ಗೃಹಿಣಿ,
ಸಾಃ ಅರಹುಣಸಿ,
ಹಾ/ವಃ ಮಂಜುನಾಥ ಗುಡಿ ಹತ್ತಿರ ಸಂಶಿಯವರ ದಿಬ್ಬ, ರೋಣ,
ತಾಃ ರೋಣ, ಜಿಃ ಗದಗ.

2. ಗೀತಾ ತಂದೆ ವೀರಭದ್ರಪ್ಪ ಕುರಿ,
ವಯಾಃ 42 ವರ್ಷ, ಉದ್ಯೋಗಃ ಗೃಹಿಣಿ,
ಸಾಃ ಅರಹುಣಸಿ,
ಹಾ/ವಃ ಮಂಜುನಾಥ ಗುಡಿ ಹತ್ತಿರ ಸಂಶಿಯವರ ದಿಬ್ಬ ರೋಣ,
ತಾಃ ರೋಣ, ಜಿಃ ಗದಗ.

3. ಸುರೇಶ ತಂದೆ ವೀರಭದ್ರಪ್ಪ ಕುರಿ,
ವಯಾ: 38 ವರ್ಷ, ಉದ್ಯೋಗ: ಮನೆಗೆಲಸ,
ಸಾ: ಅರಹುಣಸಿ,
ಹಾ/ವ: ಮಂಜುನಾಥ ಗುಡಿ ಹತ್ತಿರ ಸಂಶಿಯವರ ದಿಬ್ಬ ರೋಣ,
ತಾ: ರೋಣ, ಜಿ: ಗದಗ.

4. ಯಮನಪ್ಪ ತಂದೆ ವೀರಭದ್ರಪ್ಪ ಕುರಿ,
ವಯಾ: 36 ವರ್ಷ, ಉದ್ಯೋಗ: ಮನೆಗೆಲಸ,
ಸಾ: ಅರಹುಣಸಿ,
ಹಾ/ವ: ಮಂಜುನಾಥ ಗುಡಿ ಹತ್ತಿರ ಸಂಶಿಯವರ ದಿಬ್ಬ ರೋಣ,
ತಾ: ರೋಣ, ಜಿ: ಗದಗ.

5. ಬಾಲಮ್ಮ ಕೋಂ ಮುತ್ತಪ್ಪ ಮೂರಗೇರಿ,
ವಯಾ: 34 ವರ್ಷ, ಉದ್ಯೋಗ: ಗೃಹಿಣಿ,
ಸಾ: ಜನತಾ ಪ್ಲಾಟ, ಗಾಣದಾಳ ರೋಡ್ ಬಸವಣ್ಣ ದೇವರ ಗುಡಿ
ಹತ್ತಿರ ಯಲಬುರ್ಗ, ತಾ: ಯಲಬುರ್ಗ, ಜಿ: ಕೊಪ್ಪಳ.

6. ವಿಜಯಲಕ್ಷ್ಮಿ ತಂದೆ ವೀರಭದ್ರಪ್ಪ ಕುರಿ,
ವಯಾ: 32 ವರ್ಷ, ಉದ್ಯೋಗ: ಗೃಹಿಣಿ ,
ಸಾ: ಅರಹುಣಸಿ,
ಹಾ/ವ: ಮಂಜುನಾಥ ಗುಡಿ ಹತ್ತಿರ ಸಂಶಿಯವರ ದಿಬ್ಬ ರೋಣ,
ತಾ: ರೋಣ, ಜಿ: ಗದಗ.

7. ಪ್ರಮೀಳಾ ತಂದೆ ವೀರಭದ್ರಪ್ಪ ಕುರಿ,
ವಯಾ: 30 ವರ್ಷ, ಉದ್ಯೋಗ: ಗೃಹಿಣಿ,
ಸಾ: ಅರಹುಣಸಿ,
ಹಾ/ವ: ಮಂಜುನಾಥ ಗುಡಿ ಹತ್ತಿರ ಸಂಶಿಯವರ ದಿಬ್ಬ ರೋಣ,
ತಾ: ರೋಣ, ಜಿ: ಗದಗ.

8. ಶಾಂತವ್ವ ಕೋಂ ನಿಂಗಪ್ಪ ಕುರಿ,
ವಯಾ: 55 ವರ್ಷ, ಉದ್ಯೋಗ: ಗೃಹಿಣಿ,
ಸಾ: ಅರಹುಣಸಿ,
ಹಾ/ವ: ದರಗಾದ ಓಣಿ, ನರೇಗಲ್ಲ, ತಾ: ರೋಣ, ಜಿ: ಗದಗ.

9. ಶೋಭಾ ತಂದೆ ನಿಂಗಪ್ಪ ಕುರಿ,
ವಯಾ: 34 ವರ್ಷ, ಉದ್ಯೋಗ: ಗೃಹಿಣಿ,
ಸಾ: ಅರಹುಣಸಿ,
ಹಾ/ವ: ದರಗಾದ ಓಣಿ, ನರೇಗಲ್ಲ, ತಾ: ರೋಣ, ಜಿ: ಗದಗ.

10. ಶಾಂತವ್ವ ಕೋಂ ನಿಂಗಪ್ಪ ಕುರಿ,
ವಯಾ: 58 ವರ್ಷ, ಉದ್ಯೋಗ: ಗೃಹಿಣಿ ,
ಸಾ: ಅರಹುಣಸಿ,
ಹಾ/ವ: ಅಬ್ಬಿಗೇರಿ, ತಾ: ರೋಣ, ಜಿ: ಗದಗ.

11. ಆನಂದ ತಂದೆ ನಿಂಗಪ್ಪ ಕುರಿ,
ವಯಾ: 41 ವರ್ಷ, ಉದ್ಯೋಗ: ಕೂಲಿ,
ಸಾ: ಅರಹುಣಸಿ,
ಹಾ/ವ: ಅಬ್ಬಿಗೇರಿ, ತಾ: ರೋಣ, ಜಿ: ಗದಗ.

12. ಬಾಳವ್ವ ಕೋಂ ಲಕ್ಷ್ಮಪ್ಪ ಕುರಿ,
ವಯಾ: 85 ವರ್ಷ, ಉದ್ಯೋಗ: ಗೃಹಿಣಿ,
ಸಾ: ನರೇಗಲ್ಲ, ತಾ: ಗಜೇಂದ್ರಗಡ, ಜಿ: ಗದಗ.

**(ಪ್ರತಿವಾದಿ ಸಂಖ್ಯೆ-1 ರಿಂದ 7 ರವರ ಪರ ಶ್ರೀ ಎಸ್.ಎಂ.ಎಸ್., ವಕೀಲರು)**
**(ಪ್ರತಿವಾದಿ 8 ಮತ್ತು 9 ರವರ ಪರ ಶ್ರೀ ವಿ.ಎ.ಡಿ., ವಕೀಲರು)**
**(ಪ್ರತಿವಾದಿ 10 ಮತ್ತು 11 ರವರ ಪರ ಶ್ರೀ ವಿ.ಎಸ್.ಬಿ., ವಕೀಲರು)**
**(ಪ್ರತಿವಾದಿ 12 ರವರ ಪರ ಶ್ರೀ ಎಸ್.ಬಿ.ಎ., ವಕೀಲರು)**

| | |
|---|---|
| ದಾವೆ ಸಲ್ಲಿಸಿದ ದಿನಾಂಕಃ | **13/08/2019** |
| ದಾವೆಯ ಸ್ವರೂಪಃ | ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ |
| ಅಧಿವಿಚಾರಣೆ ಆರಂಭವಾದ ದಿನಾಂಕಃ | **07.03.2020** |
| ಅಧಿವಿಚಾರಣೆ ಮುಕ್ತಾಯವಾದ ದಿನಾಂಕಃ | **19/02/2026** |
| ತೀರ್ಪು ಹೊರಡಿಸಿದ ದಿನಾಂಕಃ | **17/06/2026** |
| ದಾವಾ ಪ್ರಕ್ರಿಯೆಯ ಒಟ್ಟು ಅವಧಿಃ | ವರ್ಷ **06** ತಿಂಗಳು **08** ದಿನಗಳು **08** |

**::ತೀರ್ಪು::**

ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿರುತ್ತಾರೆ.

**ದಾವೆಯ ವಾಸ್ತವಾಂಶ ಈ ಕೆಳಗಿನಂತಿರುತ್ತದೆ**

2. ವಾದಿ ಮತ್ತು ಪ್ರತಿವಾದಿ 1 ರಿಂದ 9 ರವರ ಮೂಲಪುರುಷ ಯಮನಪ್ಪ ತಂದೆ ನಿಂಗಪ್ಪ ಕುರಿ ಎಂದು ಇದ್ದು, ಅವರಿಗೆ ಯಲ್ಲಮ್ಮ ಕೋಂ ಯಮನಪ್ಪ ಕುರಿ ಎನ್ನುವ ಹೆಂಡತಿ ಇದ್ದು, ಸದರಿಯವರಿಬ್ಬರೂ ಮರಣ ಹೊಂದಿದ್ದು, ಅವರಿಗೆ 1) ವೀರಭದ್ರುಪ್ಪ, 2) ಶಿವಾನಂದಪ್ಪ, 3) ನಿಂಗಪ್ಪ, 4) ಬಾಲಮ್ಮ ಎನ್ನುವ 4 ಜನ ಮಕ್ಕಳಿರುತ್ತಾರೆ. ಮೂಲಪುರುಷನ ಮೊದಲನೇ ಮಗ ವೀರಭದ್ರುಪ್ಪ ಮರಣ ಹೊಂದಿದ್ದು, ಆತನಿಗೆ ಶಿವಗಂಗವ್ವ ಎನ್ನುವ ಹೆಂಡತಿ ಇರುತ್ತಾರೆ. ಸದರಿ ವೀರಭದ್ರುಪ್ಪ ಮತ್ತು ಶಿವಗಂಗವ್ವರವರಿಗೆ 1) ಗೀತಾ, 2) ಸುರೇಶ, 3) ಯಮನಪ್ಪ, 4) ಬಾಲಮ್ಮ, 5) ವಿಜಯಲಕ್ಷ್ಮೀ, 6) ಪ್ರಮೀಳಾ ಎನ್ನುವ ಮಕ್ಕಳಿರುತ್ತಾರೆ. ಮೂಲಪುರುಷನ 3 ನೇ ಮಗ ನಿಂಗಪ್ಪ ಮರಣ ಹೊಂದಿದ್ದು,

ಅವರಿಗೆ 1) ಶಾಂತವ್ವ ಎನ್ನುವ ಹೆಂಡತಿ ಮತ್ತು ಶೋಭಾ ಎನ್ನುವ ಮಗಳು ಇರುತ್ತಾರೆ. ಮೂಲಪುರುಷನು ವಾದಿ ಮತ್ತು ಪ್ರತಿವಾದಿ 1 ರಿಂದ 9 ರವರನ್ನು ಬಿಟ್ಟು ದಿನಾಂಕ 09.02.1983 ರಲ್ಲಿ ಹಾಗೂ ಆತನ ಹೆಂಡತಿ ಯಲ್ಲಮ್ಮರವರು 2000 ಇಸ್ವಿಯಲ್ಲಿ ಮರಣ ಹೊಂದಿರುತ್ತಾರೆ.

3. ವಾದಿಯು ತಮ್ಮ ವಾದಪತ್ರದಲ್ಲಿ ಮುಂದುವರೆದು, ವಾದಿ ಮತ್ತು ಪ್ರತಿವಾದಿ 1 ರಿಂದ 9 ರವರು ದಾವಾ ಆಸ್ತಿಗಳಲ್ಲಿ ಜಂಟೀ ಸ್ವಾಧೀನಾನುಭವದಲ್ಲಿರುತ್ತಾರೆ, ಸದರಿ ಆಸ್ತಿಗಳು ವಾದಿ ಮತ್ತು ಪ್ರತಿವಾದಿ 1 ರಿಂದ 9 ರವರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ, ವಾದಿಗೆ, ಪ್ರತಿವಾದಿಗಳೊಂದಿಗೆ ಜಂಟೀಯಾಗಿರಲು ಸಾಧ್ಯವಾಗದೇ ಇದ್ದುದರಿಂದ ಈತನು ದಾವಾ ಆಸ್ತಿಗಳಲ್ಲಿ ತನ್ನ ಹಿಸ್ಸಾವನ್ನು ಕೊಡಬೇಕೆಂದು ಪ್ರತಿವಾದಿಗಳಿಗೆ ಕೇಳಿಕೊಂಡರೂ ಸಹ, ಪ್ರತಿವಾದಿಗಳು ಹಿಸ್ಸಾ ಮಾಡಿಕೊಟ್ಟಿರುವುದಿಲ್ಲ ಮತ್ತು ನಿರಾಕರಿಸಿರುತ್ತಾರೆ. ಕೊನೆಗೆ ದಿನಾಂಕ 15.07.2019 ರಂದು ವಾದಿ, ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸಾಬೇಕೆಂದು ಕೋರಿಕೊಂಡಿದ್ದು, ಸದರಿಯವರು ತೀರಸ್ಕರಿಸಿರುತ್ತಾರೆ. ದಾವಾ ಶೆಡ್ಯೂಲ್ ಎ ಆಸ್ತಿಯನ್ನು ಮೃತ ವೀರಭದ್ರಪ್ಪರವರ ಹೆಸರಿನಲ್ಲಿ, ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಯಾಗಿರುತ್ತದೆ. ಮೂಲಪುರುಷ ಯಮನಪ್ಪ ತಂದೆ ನಿಂಗಪ್ಪ ಕುರಿರವರ ಮರಣದ ನಂತರ ವಾರಸು ನಾತೆಯಿಂದ ಅರಹುಣಸಿ ಗ್ರಾಮದ ರಿ.ಸ.ನಂ-242/1+2 ಸಿ ಆಸ್ತಿಗೆ ಸಂಬಂಧಿಸಿದಂತೆ ವಾರಸಾ ಮಾಡಿಕೊಂಡಿದ್ದು, ವಾರಸಾ ಸಮಯದಲ್ಲಿ ಮೂಲಪುರುಷನ ಹೆಣ್ಣು ಮಗಳಾದ ಬಾಲಮ್ಮ ಇವರು ದಾವಾ ಆಸ್ತಿಗಳಲ್ಲಿ ತನ್ನ ಹಿಸ್ಸಾವನ್ನು ಗಂಡು ಮಕ್ಕಳ

ಹೆಸರಿನಲ್ಲಿ ದಾಖಲು ಮಾಡಲು ವರದಿ ಕೊಟ್ಟಿದ್ದು, ಆ ಪ್ರಕಾರ ದಿನಾಂಕ 20.10.1983 ರಲ್ಲಿ ಡ ನಂ-2142 ರಂತೆ ದಾಖಲಾಗಿದ್ದು, ಸದರಿ ದಾಖಲೆಯಲ್ಲಿ ತನ್ನ ಹಕ್ಕನ್ನು ಬಿಟ್ಟುಕೊಟ್ಟಿದ್ದರಿಂದ ಬಾಳವ್ವ ಕೋಂ ಲಕ್ಷ್ಮಪ್ಪ ಕುರಿ ಇವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆದ್ದರಿಂದ ದಾವೆಯಲ್ಲಿ ಕೋರಿಕೊಂಡಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ವಾದಿಯು ಈ ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಗಳಿಗೆ ಸಮನ್ಸ್ ನೀಡಲಾಗಿ, ಸಮನ್ಸ್ ಜಾರಿಯಾದ ನಂತರ ಪ್ರತಿವಾದಿ 1 ರಿಂದ 7 ರವರು ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿ ಅವರುಗಳಲ್ಲಿ 3 ನೇ ಪ್ರತಿವಾದಿ ಲಿಖಿತ ತಕರಾರು ಸಲ್ಲಿಸಿದ್ದು, ಸದರಿ ಲಿಖಿತ ತಕರಾರನ್ನು ಇತರ ಪ್ರತಿವಾದಿಗಳು ಅಳವಡಿಸಿಕೊಂಡಿರುತ್ತಾರೆ. ಪ್ರತಿವಾದಿ 8 ಮತ್ತು 9 ರವರು ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿ ಲಿಖಿತ ತಕರಾರು ಸಲ್ಲಿಸಿರುತ್ತಾರೆ. ಪ್ರತಿವಾದಿ 11 ರವರು ಪ್ರತ್ಯೇಕವಾಗಿ ಹಾಜರಾಗಿ ಲಿಖಿತ ತಕರಾರನ್ನು ಸಲ್ಲಿಸಿದ್ದು, ಸದರಿಯವರ ಲಿಖಿತ ತಕರಾರನ್ನು ಪ್ರತಿವಾದಿ 10 ರವರು ಅಳವಡಿಸಿಕೊಂಡಿರುತ್ತಾರೆ.

5. ಪ್ರತಿವಾದಿ 1 ರಿಂದ 7 ರವರು ತಮ್ಮ ಲಿಖಿತ ತಕರಾರನ್ನು ಸಲ್ಲಿಸಿದ್ದು, ತಮ್ಮ ತಕರಾರಿನಲ್ಲಿ ವಾದಿಯು ಸಲ್ಲಿಸಿರುವ ಈ ದಾವೆಯು ಕಾನೂನು ಮತ್ತು ವಾಸ್ತವಾಂಶದಲ್ಲಿ ಊರ್ಜಿತವಾಗಿರುವುದಿಲ್ಲ. ದಾವಾ ಐಟಂ ನಂ-1 ಪ್ರತಿವಾದಿ 1 ರವರ ಗಂಡ ಪ್ರತಿವಾದಿ 2 ರಿಂದ 7 ರವರ ತಂದೆಯಾದ ವೀರಭದ್ರಪ್ಪ ತಂದೆ ಯಮನಪ್ಪ ಕುರಿ ಎನ್ನುವವರ ಹೆಸರಿನಲ್ಲಿದ್ದು, ಆತನ ಮರಣದ ನಂತರ ಪ್ರತಿವಾದಿ 1 ರಿಂದ 7 ರವರು ಮಾಲೀಕರಾಗಿ

ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ಆಸ್ತಿಯು ಮೃತ ವೀರಭದ್ರಪ್ಪನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಆದೇ ರೀತಿ ವಾದಿಯ ಮಾಲ್ಕಿಯಲ್ಲಿರುವ ರೋಣ ಪಟ್ಟಣದ ರಿ,ಸ.ನಂ-686/1 ಬಿ ಪೈಕಿ ಬಿನ್ ಶೇತ್ಕಿ ಪ್ಲಾಟ ನಂ-26, 1 ಗುಂಟೆ 04 ಆಣೆ ಆಸ್ತಿಯನ್ನು ದಿನಾಂಕ 06.07.1994 ರಂದು ವಾದಿಯು ಆತನ ಹೆಸರಿನಲ್ಲಿ ನೋಂದಾಯಿತ ಕ್ರಯಪತ್ರದ ಮುಖಾಂತರ ಖರೀದಿಸಿದ್ದು. ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿಯಿಂದ ಬಂದಂತಹ ಆದಾಯದಿಂದ ಖರೀದಿಸಿದ್ದು, ಸದರಿ ಆಸ್ತಿಯನ್ನು ವಾದಿಯು ಉದ್ದೇಶ ಪೂರ್ವಕವಾಗಿ ಸೇರಿಸದೇ ಇರುವುದರಿಂದ ದಾವೆಯು ಊರ್ಜಿವಾಗಿರುವುದಿಲ್ಲ. ದಾವಾ ಬಿ ಶೆಡ್ಯೂಲ್ ನಲ್ಲಿ ಕಾಣಿಸಿದ ಅರಹುಣಸಿ ಗ್ರಾಮದ ರಿ.ಸ.ನಂ-242/1+2 ಸಿ ರ ವಿಸ್ತೀರ್ಣ 11 ಎಕರೆ 32 ಗುಂಟೆ ಪೂರ್ಣ ಆಸ್ತಿಯು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಇದ್ದು, ಜಂಟೀ ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ಆಸ್ತಿಯು ಮೂಲಪುರುಷನ ಮಾಲ್ಕೀ ಸ್ವಾಧೀನದಲ್ಲಿದ್ದು, ಸದರಿ ಆಸ್ತಿಯು ವಾದಿಯ ತಂದೆ ಯಮನಪ್ಪ, ಅವರ ಸಹೋದರರಾದ ಈಶ್ವರಪ್ಪ, ಮೃತ ಭೀಮಪ್ಪ, ಮೃತ ಹನಮಪ್ಪ ಇವರ ನಡುವೆ 1981 ರಲ್ಲಿ ಆದ ಅಪಸಾತ್ ವಾಟ್ನಿಯಲ್ಲಿ ಯಮನಪ್ಪನ ಹೆಸರಿಗೆ ಬಂದಿದ್ದು ಇರುತ್ತದೆ. ಆ ಬಗ್ಗೆ ಡ ನಂ-1605 ರಲ್ಲಿ ನಮಾದಿಸಲಾಗಿದೆ. ಆದೇ ರೀತಿ ಅರಹುಣಸಿ ಗ್ರಾಮದ ರಿ,ಸ.ನಂ-145 ವಿಸ್ತೀರ್ಣ 8 ಎಕರೆ 30 ಗುಂಟೆ (ಪೋಟ ಕರಾಬ 1-18+3 ಇರುವ ಆಸ್ತಿಯು ಮೂಲಪುರುಷನ ಸಹೋದರರ ಹಿಸ್ಸೆಗೆ ಪಾಲುವಾಟ್ನಿಯಲ್ಲಿ ಬಂದಿದ್ದು, ಪೋಟ ಕರಾಬ 03 ಗುಂಟೆ, ಉಳಿದ ಜಮೀನು 7 ಎಕರೆ 9 ಗುಂಟೆ ಜಮೀನು ಸಹ ಮೂಲಪುರುಷ ಸಹೋದರರ ನಡುವೆಯಾದ ಪಾಲುವಾಟ್ನಿಯಲ್ಲಿ ಮೂಲಪುರುಷ ಯಮನಪ್ಪ ಮತ್ತು ಆತನ

ಸಹೋದರರಾದ ಈಶ್ವರಪ್ಪ, ಭೀಮಪ್ಪ ಹನಮಪ್ಪ ಇವರ ಸಾಮೂಹಿಕ ಹಿಸ್ಸೆಗೆ ಬಂದಿದ್ದು ಇರುತ್ತದೆ. ಈಗ ಸದರಿ ಆಸ್ತಿಯು ಈಶ್ವರಪ್ಪನ ಮಗನಾದ ರಮೇಶ ದತ್ತಕ ತಂದೆ ಹನಮಪ್ಪ ಮತ್ತು ಭೀಮಪ್ಪ, ಹನಮಪ್ಪ ಮತ್ತು ನಿಂಗಪ್ಪ ತಂದೆ ಯಮನಪ್ಪ ಕುರಿ ಮತ್ತು ವೀರಭದ್ರಪ್ಪ ತಂದೆ ಯಮನಪ್ಪ ಕುರಿ ಇವರ ಸಾಮೂಹಿಕ ಮಾಲೀಕತ್ವದಲ್ಲಿದ್ದು, ಅದರಲ್ಲಿ 1 ನೇ ಪ್ರತಿವಾದಿಯ ಗಂಡ ಮೃತ ವೀರಭದ್ರಪ್ಪರವರಿಗೆ 1/3 ಹಿಸ್ಸೆ ಇರುತ್ತದೆ. ಸದರಿ ಆಸ್ತಿಯು ಸಹ ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಸದರಿ ಆಸ್ತಿಯನ್ನು ವಾದಪತ್ರದಲ್ಲಿ ಕಾಣಿಸಿರುವುದಿಲ್ಲ ಮತ್ತು ಮೂಲಪುರುಷ ಯಮನಪ್ಪನ ಸಹೋದರರನ್ನು ಅವಶ್ಯಕ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ.

6. ಪ್ರತಿವಾದಿ 1 ರಿಂದ 7 ರವರು ತಮ್ಮ ಲಿಖಿತ ತಕರಾರಿನಲ್ಲಿ ಮುಂದುವರೆದು ಮೃತ ಯಮನಪ್ಪನ ಸಹೋದರರ ವಂಶಾವಳಿ ಈ ಕೆಳಗಿನಂತೆ ಇದ್ದು, ಮೂಲಪುರುಷ ನಿಂಗಪ್ಪ ಎಂದು ಇದ್ದು ಅವರಿಗೆ 1) ಈಶ್ವರಪ್ಪ 2) ಯಮನಪ್ಪ, 3) ಭೀಮಪ್ಪ 4) ಹನಮಪ್ಪ ಎನ್ನುವ 4 ಜನ ಮಕ್ಕಳಿರುತ್ತಾರೆ. ಸದರಿ 4 ಜನ ಮಕ್ಕಳು ಮೃತಪಟ್ಟಿರುತ್ತಾರೆ. ಈಶ್ವರಪ್ಪರವರಿಗೆ ರಮೇಶ ದತ್ತಕ ತಂದೆ ಹನಮಪ್ಪನ ಕುರಿರವರು ವಾರಸುದಾರರಾಗಿರುತ್ತಾನೆ. ಯಮನಪ್ಪರವರಿಗೆ ಶಿವಗಂಗವ್ವ ಎನ್ನುವ ಹೆಂಡತಿ ಇದ್ದು, ಪ್ರತಿವಾದಿ 1 ರಿಂದ 7 ರವರು ಸದರಿಯವರ ವಾರಸುದಾರರಾಗಿರುತ್ತಾರೆ. 3 ನೇ ಮಗ ಭೀಮಪ್ಪರವರಿಗೆ ಬಸವರಾಜ ಒಬ್ಬನೇ ಮಗನಾಗಿರುತ್ತಾನೆ. 4 ನೇ ಮಗ ಹನಮಪ್ಪರವರಿಗೆ ಶಾಂತವ್ವ ಎನ್ನುವ ಹೆಂಡತಿ ಇದ್ದು, ಅವರಿಗೆ ಈಶ್ವರಪ್ಪನ ಮಗ ರಮೇಶ ದತ್ತಕ

ಮಗನಾಗಿರುತ್ತನೆ. ವಾದಿಯು ಈ ದಾವೆಯಲ್ಲಿ ಪಾಲುವಾಟ್ನಿ ಮತ್ತು ಪ್ರತ್ಯೇಕ ಸ್ವಾಧೀನತೆಗಾಗಿ ದಾಖಲಿಸಿರುವುದರಿಂದ ರಿ.ಸ.ನಂ-145 ಜಮೀನನಲ್ಲಿ ಬರತಕ್ಕಂತಹ ವಾರಸದಾರರಾದ ಈ ಮೇಲ್ಕಾಣಿಸಿದವರನ್ನು ಪಕ್ಷಗಾರರನ್ನಾಗಿ ಮಾಡದೆ ಇರುವುದರಿಂದ ದಾವೆಯು ಊರ್ಜಿತವಾಗಿರುವುದಿಲ್ಲ. ಈ ಬಗ್ಗೆ ಪ್ರತಿವಾದಿ 1 ರಿಂದ 7 ರವರು ಸದರಿ ಮೇಲ್ಕಣಿಸಿದ ದಾವಾ ಆಸ್ತಿಗಳಲ್ಲಿ ವಾದಿಯ ಹೆಸರಿನಲ್ಲಿರುವ ಆಸ್ತಿಗಳಲ್ಲಿ ತಮ್ಮದು 1/3 ಹಿಸ್ಸೆ ಇರುತ್ತದೆ ಎಂದು ಘೋಷಿಸಲು ಎದುರು ದಾವೆಯನ್ನು ಮಾಡಿದ್ದು ಇರುತ್ತದೆ. ವಾದಿಗಳು ಸಲ್ಲಿಸಿದ ವಂಶಾವಳಿ ನಿಜ ಇರುವುದಿಲ್ಲ.

7. ಪ್ರತಿವಾದಿ 1 ರಿಂದ 7 ರವರು ತಮ್ಮ ಲಿಖಿತ ತಕರಾರಿನಲ್ಲಿ ಮುಂದುವರೆದು ಮೂಲಪುರುಷ ಯಮನಪ್ಪ ತಂದೆ ನಿಂಗಪ್ಪ ಕುರಿರವರು ದಿನಾಂಕ 09.02.1983 ರಂದು ಮರಣ ಹೊಂದಿದ್ದು, ಅವರಿಗೆ ಲಕ್ಷ್ಮಮ್ಮ ಕೋಂ ಯಮನಪ್ಪ ಕುರಿ ಎನ್ನುವ ಹೆಂಡತಿ ಇದ್ದು, ಅವರು ಸಹ ಮರಣ ಹೊಂದಿರುತ್ತಾರೆ. ಯಮನಪ್ಪ ಮತ್ತು ಲಕ್ಷ್ಮಮ್ಮರವರಿಗೆ 1) ಬಾಲಮ್ಮ 2) ವೀರಭದ್ರಪ್ಪ 3) ಶಿವಾನಂದ 4) ನಿಂಗಪ್ಪ ಎನ್ನುವ 4 ಜನ ಮಕ್ಕಳಿದ್ದು, ಅವರಲ್ಲಿ ವೀರಭದ್ರಪ್ಪ ಮತ್ತು ನಿಂಗಪ್ಪರವರು ಮರಣ ಹೊಂದಿರುತ್ತಾರೆ. ವಾದಿ ಶಿವಗಂಗವ್ವ ಮತ್ತು ಬಾಲಮ್ಮರವರು ಜೀವಂತವಾಗಿರುತ್ತಾರೆ, ವೀರಭದ್ರಪ್ಪನಿಗೆ ಪ್ರತಿವಾದಿ 1 ರಿಂದ 7 ರವರು ಹೆಂಡತಿ ಮತ್ತು ಮಕ್ಕಳಾಗಿರುತ್ತಾರೆ. ಮೃತ ನಿಂಗಪ್ಪರವರಿಗೆ ಪ್ರತಿವಾದಿ 8 ಹೆಂಡತಿ, ಪ್ರತಿವಾದಿ 9 ರವರು ಅವರ ಮಗಳಾಗಿರುತ್ತಾರೆ. ಈ ದಾವೆಯಲ್ಲಿ ಯಮನಪ್ಪನ ಮಗಳಾದ ಬಾಲಮ್ಮರವರು

ಅವಶ್ಯಕ ಪಕ್ಷಗಾರರನ್ನಾಗಿ ಮಾಡದೆ ಇರುವುದರಿಂದ ದಾವೆಯು ಊರ್ಜಿತವಾಗಿರುವುದಿಲ್ಲ.

8. ಪ್ರತಿವಾದಿ 1 ರಿಂದ 7 ರವರು ಎದುರು ದಾವೆ ಮಾಡಿ ತಮ್ಮ ಎದುರು ದಾವೆಯಲ್ಲಿ ರೋಣ ಪಟ್ಟಣದ ರಿ.ಸ.ನಂ-686/1 ಬಿ ಬಿನ್ ಶೇತ್ಕಿ ಪೈಕಿ 26 ರಲ್ಲಿ ವಿಸ್ತೀರ್ಣ 1 ಗುಂಟೆ 04 ಆಣೆ ಉಳಿದ 16 ಮೀಟರ್, 50 ಸೆ.ಮೀಟರ್, ಪೂರ್ವ-ಪಶ್ಚಿಮ 8 ಮೀಟರ್, ಉತ್ತರ-ದಕ್ಷಿಣ 16 ಮೀಟರ್ ಚೌಕ್ಕಬಂದಿ ಪೂರ್ವಕ್ಕೆ -ರಸ್ತೆ , ಪಶ್ಚಿಮಕ್ಕೆ ಪ್ಲಾಟ ನಂ-25, ಉತ್ತರಕ್ಕೆ -ರಸ್ತೆ, ದಕ್ಷಿಣಕ್ಕೆ- ಪ್ಲಾಟ ನಂ-13 ಮಧ್ಯದಲ್ಲಿರುವ ಈ ಆಸ್ತಿಯು ದಿನಾಂಕ 06.07.1994 ರಂದು ವಾದಿಯ ಹೆಸರಿನಲ್ಲಿ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಯಾಗಿದ್ದು, ಸದರಿ ಆಸ್ತಿಯು ಇಲ್ಲಿಯವರೆಗೆ ಯಾವುದೇ ವಿಭಾಗ ಮಾಡಿರುವುದಿಲ್ಲ. ಸದರಿ ಆಸ್ತಿಯನ್ನು ಸೇರಿಸದೆ ಇರುವುದರಿಂದ ಹಾಗೂ ಅರಹುಣಸಿ ಗ್ರಾವುದ ರಿ.ಸ.ನಂ-145 ರಲ್ಲಿ ವಿಸ್ತೀರ್ಣ 8 ಎಕರೆ 30 ಗುಂಟೆ ಇರುವ ಆಸ್ತಿಯು ಮೂಲಪುರುಷನ ಸಹೋದರರನ ಹೆಸರಿಗೆ ಪಾಲುವಾಟ್ನಿಯಲ್ಲಿ ಬಂದಿದ್ದು, ಸದರಿ ಆಸ್ತಿಯು ವಾದಿ, ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ಮತ್ತು ಪಾಲುವಾಟ್ನಿಯಲ್ಲಿ ಬಂದಿರುವುದರಿಂದ ಸದರಿ ಆಸ್ತಿಗಳನ್ನು ಸೇರಿಸದೆ ಇರುವುದರಿಂದ ಆ ಆಸ್ತಿಯು ಪ್ರತಿವಾದಿ 1 ರಿಂದ 7 ರವರು ಮೂಲಪುರುಷನ ಮಗ ಮೃತ ವೀರಭದ್ರಪ್ಪನ ಹೆಂಡತಿ ಮತ್ತು ಮಕ್ಕಳು ಇರುವುದರಿಂದ ಸದರಿಯವರು ಈ ಆಸ್ತಿಯಲ್ಲಿ 1/3 ಹಿಸ್ಸೆ ಇರುತ್ತದೆ. ಆದ್ದರಿಂದ ಎದುರು ದಾವೆಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

9. ಪ್ರತಿವಾದಿ 8 ಮತ್ತು 9 ರವರು ಲಿಖಿತ ತಕರಾರು ಸಲ್ಲಿಸಿ ತಮ್ಮ ಲಿಖಿತ ತಕರಾರಿನಲ್ಲಿ ವಾದಿಯ ದಾವೆಯು ಭಾಗಶಃ ನಿಜ ಮತ್ತು ಸರಿ ಇರುತ್ತದೆ ಹೀಗಾಗಿ ವಾದಿಯ ದಾವೆಯು ಕಾನೂನು ಮತ್ತು ವಾಸ್ತವಾಂಶಗಳಿಂದ ಕೂಡಿರುವುದಿಲ್ಲ, ಮೇಲ್ನೋಟಕ್ಕೆ ವಾದಿಯ ದಾವೆಯನ್ನು ಕಿತ್ತು ಹಾಕಲು ಯೋಗ್ಯವಾಗಿದೆ. ವಾದಿ ಮತ್ತು ಪ್ರತಿವಾದಿ 1 ರವರ ಗಂಡ ಕೂಡಿ ಆಸ್ತಿಯ ಖಾತೆ ಸಂಖ್ಯೆ-365 ಮತ್ತು 366 ಎರಡು ಆಸ್ತಿಗಳನ್ನು ತಮ್ಮ ಪಿತ್ರಾರ್ಜಿತದಿಂದ ಬಂದ ಅಸ್ತಿಯ ಆದಾಯದಿಂದ ಖರೀದಿಸಿದ ಆಸ್ತಿಗಳಾಗಿದ್ದು, ಮೃತ ನಿಂಗಪ್ಪ ತಂದೆ ಯಮನಪ್ಪ ಕುರಿ ಇತನು ಕೆ.ಎಸ್,ಆರ್.ಟಿ.ಸಿ ಯಲ್ಲಿ ಬಸ್ ಕಂಡಕ್ಟರ್ ಅಂತಾ ಕೆಲಸ ಮಾಡುತ್ತಿದ್ದನು. ಈ ಎರಡು ಆಸ್ತಿಗಳನ್ನು 3 ಜನ ಸೇರಿಯೇ ಖರೀದಿಸಿರುತ್ತಾರೆ. ಆದ್ದರಿಂದ ಪ್ರತಿವಾದಿ 8 ಮತ್ತು 9 ರವರಿಗೆ ಸದರಿ ಆಸ್ತಿಗಳಲ್ಲಿ ಕಾನೂನು ಬದ್ದ ಹಿಸ್ಸೆ ಇರುತ್ತದೆ. ಮೂಲಪುರುಷನ ಮಗಳಾದ ಬಾಲಮ್ಮರವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ದಾವೆಯು ಊರ್ಜಿತವಾಗಿರುವುದಿಲ್ಲ. ಸದರಿ ಬಾಲಮ್ಮರವರು 1983 ರಲ್ಲಿ ದಾವಾ ಆಸ್ತಿಗಳಲ್ಲಿ ತಮ್ಮ ಹಿಸ್ಸೆಯನ್ನು ಬಿಟ್ಟುಕೊಟ್ಟಿರುತ್ತಾರೆ ಎನ್ನುವ ಸಂಗತಿಯು ಸುಳ್ಳುನಿಂದ ಕೂಡಿರುತ್ತದೆ. ಆದ್ದರಿಂದ ಪ್ರತಿವಾದಿ 8 ಮತ್ತು 9 ರವರ ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ಸಾಮೂಹಿಕ ಹಿಸ್ಸೆಯಾಗಿ ¼ ಹಿಸ್ಸೆ ಇರುತ್ತದೆ. ಸದರಿ ಹಿಸ್ಸೆಯನ್ನು ನೀಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

10. ಪ್ರತಿವಾದಿ 10 ರವರು ಪ್ರತಿವಾದಿ 11 ರವರ ಲಿಖಿತ ತಕರಾರನ್ನು ಅಳವಡಿಸಿಕೊಂಡಿರುತ್ತಾರೆ.

11. ಪ್ರತಿವಾದಿ 11 ರವರು ಲಿಖಿತ ತಕರಾರು ಸಲ್ಲಿಸಿದ್ದು, ಸದರಿಯವರು ವಾದಪತ್ರದ ಸಂಗತಿಯನ್ನು ಅಳೆಗಳೆದಿರುತ್ತಾರೆ. ವಾದಿ ಸಲ್ಲಿಸಿದ ಈ ದಾವೆಯು ಕಾನೂನು ಮತ್ತು ವಾಸ್ತವಾಂಶ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ಮೂಲಪುರುಷನ 3 ನೇ ಮಗ ನಿಂಗಪ್ಪ ಇವರಿಗೆ ಶಾಂತವ್ವ ಎನ್ನುವ ಹೆಂಡತಿ ಮತ್ತು ಶೋಭಾ ಎನ್ನುವ ಮಗಳು ಎಂದು ಕಾಣಿಸಿರುವ ಸಂಗತಿಯು ಸಂಪೂರ್ಣ ಸುಳ್ಳುನಿಂದ ಕೂಡಿರುತ್ತದೆ. ಮೃತ ನಿಂಗಪ್ಪುನಿಗೆ ಪ್ರತಿವಾದಿ 10 ಶಾಂತವ್ವ ಮತ್ತು 11 ನೇ ಪ್ರತಿವಾದಿ ಆನಂದ ಹೆಂಡತಿ ಮತ್ತು ಮಗ ಇರುತ್ತಾರೆ. 10 ನೇ ಪ್ರತಿವಾದಿ ನಿಂಗಪ್ಪನ ಕಾನೂನು ಬದ್ದ ಹೆಂಡತಿ ಇದ್ದು, ಅವರ ವೈವಾಹಿಕ ಜೀವನದಿಂದ ಪ್ರತಿವಾದಿ 11 ರವರು ಜನಿಸಿರುತ್ತಾರೆ. ಸದರಿಯವರು ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು ಎನ್.ಡಬ್ಲ್ಯೂ.ಕೆ.ಆರ್.ಟಿ.ಸಿ ರವರು ಹೆಂಡತಿ ಮತ್ತು ಮಗ ಎಂದು ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ಬಂದಲ್ಲಿ ಮಾತ್ರ ಮೃತನ ಸೇವಾ ಸೌಲಭ್ಯಗಳನ್ನು ನೀಡುವುದಾಗಿ ತಿಳಿಸಿದ್ದರಿಂದ ಪ್ರತಿವಾದಿ 10 ಮತ್ತು 11 ರವರು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗದಗ ಇವರಲ್ಲಿ ಅಸಲು ದಾವಾ ಸಂಖ್ಯೆ-07/2019 ಎಂದು ದಾವೆಯನ್ನು ಸಲ್ಲಿಸಿದ್ದು, ಅದರಲ್ಲಿ ಸಂಪೂರ್ಣವಾಗಿ ವಿಚಾರಣೆಯಾಗಿ ದಿನಾಂಕ 12.02.2020 ರಂದು ಮೃತ ನಿಂಗಪ್ಪರವರಿಗೆ ಪ್ರತಿವಾದಿ 10 ಮತ್ತು 11 ರವರು ಕಾನೂನು ಬದ್ದ ಮೊದಲನೇ ದರ್ಜೆಯ ವಾರಸುದಾರರು ಅಂತಾ ನಿರ್ಣಯ ಮಾಡಿ ದಾವೆಯನ್ನು ಡಿಕ್ರಿ ಮಾಡಿರುತ್ತಾರೆ. ನಿಂಗಪ್ಪನಿಗೆ ಬರಬೇಕಾದ 1/3 ಹಿಸ್ಸೆಯನ್ನು ಪ್ರತಿವಾದಿ 10 ಮತ್ತು 11 ರವರು ಹಕ್ಕುದಾರರು ಇರುತ್ತಾರೆ ಪ್ರತಿವಾದಿ 8 ಮತ್ತು 9 ರವರು ನಿಂಗಪ್ಪನಿಗೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ. ವಾದಿಯು ದುರುದ್ದೇಶದಿಂದ ಪ್ರತಿವಾದಿ 10

ಮತ್ತು 11 ರವರು ಹಿಸ್ಸೆಯನ್ನು ಎತ್ತಿಹಾಕಲು 8 ಮತ್ತು 9 ನೇ ಪ್ರತಿವಾದಿಯನ್ನು ದಾವೆಯಲ್ಲಿ ಅನಾವಶ್ಯಕ ಪಕ್ಷಗಾರರನ್ನಾಗಿ ಮಾಡಿರುತ್ತಾರೆ. ಸದರಿ 10 ಮತ್ತು 11 ನೇ ಪ್ರತಿವಾದಿಗಳ ಹೆಸರು ನಿಂಗಪ್ಪನ ಸೇವಾ ಪುಸ್ತಕದಲ್ಲಿ ವಾರಸುದಾರರು ಎಂದು ನಮೂದಿರುತ್ತದೆ. ಸದರಿಯವರ ಹೆಸರು ನಾಮನಿರ್ದೇಶನ ಸ್ಥಳದಲ್ಲಿ ಸಹ ನಮೂದಾಗಿರುತ್ತದೆ. ಸದರಿ ದಾವೆಯ ಸಂಗತಿಯು ಊರಿನಲ್ಲಿ ಜನರು ಮಾತನಾಡಿಕೊಳ್ಳುತ್ತಿರುವದನ್ನು ತಿಳಿದುಕೊಂಡು, ನ್ಯಾಯಾಲಯಕ್ಕೆ ಬಂದ ವಿಚಾರ ಮಾಡಿದಾಗ ವಾದಿ ದಾವೆ ಸಲ್ಲಿಸಿದ ಬಗ್ಗೆ ತಿಳಿದು ಬಂದಿದ್ದು, ನಂತರ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆಗೊಂಡಿರುತ್ತಾರೆ. ಆದ್ದರಿಂದ ಪ್ರತಿವಾದಿ 10 ಮತ್ತು 11 ರವರು ಎದುರು ದಾವೆ ಇರುತ್ತದೆ, ಎದುರು ದಾವೆಯಲ್ಲಿ ಕೋರಿಕೊಂಡ 1/3 ಹಿಸ್ಸಾವನ್ನು ನೀಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

12. ಈ ಮೇಲಿನ ವಾಸ್ತವಾಂಶಗಳಿಂದ ಈ ಕೆಳಕಂಡ ವಿವಾದಾಂಶಗಳು ಹಿಂದಿನ ಪೀಠಾಸೀನಾಧಿಕಾರಿಗಳ ನಿರ್ಣಯಕ್ಕೆ ಉದ್ಭವಾಗಿರುತ್ತವೆ:-

**::ISSUES::**

1. Whether the plaintiff proves that, the suit schedule properties are joint ancestral properties ?
2. Whether the defendant No.3 proves that, the plaint A schedule property is the self acquired property of deceased Veerabhadrappa ?
3. Whether the G-Tree is proper and correct ?

4. Whether the defendant No.11 proves that, the defendant No.10 has born out of the wedlock with Ningappa ?
5. Whether the suit is bad for non-joinder of necessary parties ?
6. Whether the plaintiffs are entitled for the reliefs as sought for ?
7. Whehter the defendant No.3, 8 and 9 are entitled for relief sought in their counter claim ?
8. What order or decree ?

13. ಈ ಮೇಲಿನ ವಿವಾದಾಂಶಗಳನ್ನು ರುಜುವಾತುಪಡಿಸಲು, ವಾದಿಯು ಸ್ವತಃ ಪಿಡಬ್ಲ್ಯೂ.1 ಎಂದು ವಿಚಾರಣೆಗೆ ಒಳಗಾಗುವ ಮುಖಾಂತರ ನ್ಯಾಯಾಲಯ ಮುಂದೆ ನಿಪಿ-1 ರಿಂದ 15 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿ 8 ಮತ್ತು 9 ರವರ ಪರ ವಕೀಲರು ಪಾಟೀ ಸವಾಲು ಮಾಡಿದಾಗ ನಿಡಿ-1 ನ್ನು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಆದೇ ರೀತಿ ಪ್ರತಿವಾದಿಗಳ ಪರವಾಗಿ 4 ನೇ ಪ್ರತಿವಾದಿ ಸ್ವತಃ ಡಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಗಾಗುವ ಮುಖಾಂತರ ನ್ಯಾಯಾಲಯ ಮುಂದೆ ನಿಡಿ-2 ರಿಂದ 7 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ನಂತರ ಸದರಿಯವರ ಸಾಕ್ಷ್ಯವನ್ನು ದಿನಾಂಕ 19.02.2020 ರಂದು ರದ್ದುಗೊಳಿಸಲಾಗಿತ್ತು. ಪ್ರತಿವಾದಿ 8 ರವರು ಸ್ವತಃ ಡಿ.ಡಬ್ಲ್ಯೂ-2 ಎಂದು ವಿಚಾರಣೆ ಒಳಗಾಗಿ ನಿಡಿ-8 ಮತ್ತು 9 ದಾಖಲೆಗಳನ್ನು

ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿ **11** ರವರು ಸ್ವತಃ ಡಿ.ಡಬ್ಲ್ಯೂ-**3** ಎಂದು ವಿಚಾರಣೆ ಒಳಗಾಗಿ ನಿಡಿ-**10** ಮತ್ತು **11** ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ.

**14.** ಉಭಯ ಪಕ್ಷಗಾರರ ವಕೀಲರ ವಾದವನ್ನು ಅಲಿಸಲಾಯಿತ್ತು.

15. ಈ ಮೇಲಿನ ವಿವಾದಾಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ :-

| | | |
|---|---|---|
| ವಿವಾದಾಂಶ 1 | - | ಸಕಾರಾತ್ಮಕವಾಗಿ |
| ವಿವಾದಾಂಶ 2 | - | ನಕಾರಾತ್ಮಕವಾಗಿ |
| ವಿವಾದಾಂಶ 3 | - | ನಕಾರಾತ್ಮಕವಾಗಿ |
| ವಿವಾದಾಂಶ 4 | - | ಸಕಾರಾತ್ಮಕವಾಗಿ |
| ವಿವಾದಾಂಶ 5 | - | ಸಕಾರಾತ್ಮಕವಾಗಿ |
| ವಿವಾದಾಂಶ 6 | - | ಸಕಾರಾತ್ಮಕವಾಗಿ |
| ವಿವಾದಾಂಶ 7 | - | ನಕಾರಾತ್ಮಕವಾಗಿ |
| ವಿವಾದಾಂಶ 8 | - | ಮಾಡಲಾದ ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ |

**::ಕಾರಣಗಳು ::**

16. **ವಿವಾದಾಂಶ 1 ರಿಂದ 3**:- ಈ ವಿವಾದಾಂಶಗಳು ಒಂದಕ್ಕೊಂದು ಸಂಬಂಧ ಹೊಂದಿರುವುದರಿಂದ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ. ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾ ಆಸ್ತಿಗಳಲ್ಲಿ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿರುವುದರಿಂದ ದಾವಾ ಆಸ್ತಿಗಳು ವಾದಿ ಹಾಗೂ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಜಂಟೀ

ಸ್ವಾಧೀನಾನುಭವದಲ್ಲಿರುತ್ತಾರೆಂದು ರುಜುವಾತುಪಡಿಸುವ ಹೊಣೆಗಾರಿಕೆ ವಾದಿಯದ್ದೇ ಆಗಿರುತ್ತದೆ. ಆದೇ ರೀತಿ ಪ್ರತಿವಾದಿ 3 ರವರು ದಾವಾ ಶೆಡ್ಯೂಲ್ ಎ ಆಸ್ತಿಯು ಆತನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಮತ್ತು ದಾವೆಯಲ್ಲಿ ಹಾಜರುಪಡಿಸಿರುವ ವಂಶವೃಕ್ಷ ಸರಿ ಇರುವುದಿಲ್ಲ ಎಂದು ರುಜುವಾತುಪಡಿಸುವ ಹೊಣೆಗಾರಿಕೆ ಪ್ರತಿವಾದಿಗಳದೇ ಆಗಿರುತ್ತದೆ. ವಾದಿಯು ಸದರಿ ಸಂಗತಿಗಳನ್ನು ರುಜುವಾತುಪಡಿಸುವ ಸಲುವಾಗಿ ಸ್ವತಃ ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಗಾಗಿ ತಮ್ಮ ಸಾಕ್ಷ್ಯದಲ್ಲಿ ವಾದಪತ್ರದ ಸಂಗತಿಗಳನ್ನು ಪುನರುಚ್ಚಿರಿಸುತ್ತಾರೆ.

17. ವಾದಿಗೆ ಪ್ರತಿವಾದಿ 10 ಮತ್ತು 11 ನೇ ರವರ ಪರ ವಕೀಲರು ಪಾಟೀ ಸವಾಲು ಮಾಡಿದ್ದು ತಮ್ಮ ಪಾಟೀ ಸವಾಲಿನಲ್ಲಿ ಯಮನಪ್ಪ ಕುರಿ ರವರಿಗೆ 3 ಜನ ಗಂಡು ಮಕ್ಕಳು, 1 ಹೆಣ್ಣು ಮಗಳು. ಹೆಣ್ಣು ಮಗಳ ಹೆಸರು ಬಾಳಮ್ಮ. ವೀರಭದ್ರಪ್ಪ ನನ್ನ ಅಣ್ಣ, ನನ್ನ ಅಣ್ಣ ವೀರಭದ್ರಪ್ಪ 2016 ರಲ್ಲಿ ತೀರಿಕೊಂಡಿರುತ್ತಾರೆ. ಅವರ ಹೆಂಡತಿಯ ಹೆಸರು ಶಿವಗಂಗವ್ವ. ವೀರಭದ್ರಪ್ಪರವರಿಗೆ ಪ್ರತಿವಾದಿ 2 ರಿಂದ 7 ರವರು ಮಕ್ಕಳು. ನನ್ನ ಸಹೋದರ ನಿಂಗಪ್ಪ ದಿನಾಂಕ 11.07.2008 ರಲ್ಲಿ ತೀರಿಕೊಂಡಿರುತ್ತಾರೆ. ಸದರಿ ನಿಂಗಪ್ಪನಿಗೆ ಶಾಂತವ್ವ ಹೆಂಡತಿ ಎಂದರೆ ಸರಿ. ನಿಂಗಪ್ಪರವರಿಗೆ 10 ನೇ ಪ್ರತಿವಾದಿ ಶಾಂತವ್ವ ಕೋಂ ನಿಂಗಪ್ಪ ಕುರಿ ಹೆಂಡತಿ ಎಂದರೆ ಸರಿಯಲ್ಲ. ನಿಂಗಪ್ಪ ಮತ್ತು ಶಾಂತವ್ವರವರಿಗೆ 11 ನೇ ಪ್ರತಿವಾದಿ ಆನಂದ ಮಗ ಎಂದರೆ ಸರಿಯಲ್ಲ. ಬಾಳಮ್ಮ ಜೀವಂತವಿದ್ದಾಳೆ. ಸದರಿ ಬಾಳಮ್ಮರವರನ್ನು ದಾವೆಯಲ್ಲಿ ಸೇರಿಸಿಲ್ಲ. ಬಾಳಮ್ಮನಿಗೆ ಬಂಗಾರ ಮತ್ತು ಹಣ ನೀಡಿರುವ ಬಗ್ಗೆ ದಾಖಲೆ ಇದೆ. ಮೂಲಪುರುಷ ಯಮನಪ್ಪನಿಗೆ 13 ಎಕರೆ ಜಮೀನು ಇದೆ. ಎ ಶೆಡ್ಯೂಲ್ ಸ್ವತ್ತು

ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ. ಬಿ ಶೆಡ್ಯೂಲ್ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ. ಸದರಿ ಎರಡು ಸ್ವತ್ತುಗಳಲ್ಲಿ ಇಂದಿಗೂ ಯಾವುದೇ ಪಾಲುವಾಟ್ನಿಯಾಗಿಲ್ಲ ಎಂದರೆ ಸರಿ. ನಿಂಗಪ್ಪ ಕೆ.ಎಸ್.ಆರ್.ಟಿ.ಸಿ ಯಲ್ಲಿ ನೌಕರಿ ಮಾಡುತ್ತಿದ್ದ ಎಂದರೆ ಸರಿ. ಪ್ರತಿವಾದಿ 10 ಮತ್ತು 11 ರವರು ಗದಗನ ಜಿಲ್ಲಾ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ-7/2019 ನ್ನು ನಿಂಗಪ್ಪರವರ ನೌಕರಿಯ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನರೇಗಲ್ಲನ ಶಾಂತವ್ವ ಮತ್ತು ಶೋಭಾ ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ 10 ಮತ್ತು 11 ರವರು ನಿಂಗಪ್ಪರವರ ವಾರಸುದಾರರು ಎಂದು ತೀರ್ಮಾನವಾಗಿದೆ ಎಂದರೆ ಗೊತ್ತಿಲ್ಲ. ಎಂದು ಒಪ್ಪಿಕೊಂಡು ಇತರ ಸಂಗತಿಗಳನ್ನು ಅಲ್ಲೆಗಳೆದಿರುತ್ತಾರೆ.

18. ಈ ಸಾಕ್ಷಿದಾರರಿಗೆ ಪೈಕಿ ಪ್ರತಿವಾದಿ 8 ಮತ್ತು 9 ರವರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ನನ್ನ ತಂದೆಗೆ 4 ಜನ ಮಕ್ಕಳು ಎಂದರೆ ಸರಿ. ನನ್ನ ಅಕ್ಕನ ಹೆಸರು ಬಾಲಮ್ಮ ನನ್ನ ಮತ್ತು ನಿಂಗಪ್ಪನ ಮದುವೆ ಕಂಠಿಬಸಸವೇಶ್ವರ ದೇವಸ್ಥಾನದಲ್ಲಿ ನಡೆಯಿತು. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಕಾಣುವ ಮದುವೆ ಹೆಣ್ಣು ಮತ್ತು ಗಂಡ ನಿಂಗಪ್ಪ ಮತ್ತು ಆತನ ಹೆಂಡತಿ. 8 ನೇ ಪ್ರತಿವಾದಿ ಸದರಿ ನಿಂಗಪ್ಪನ ಹಂಡತಿ ಎಂದರೆ ಸರಿ. ಸದರಿಯವರು ಹೆಸರು ಶಾಂತವ್ವ ಎಂದರೆ ಸರಿ. ಸದರಿ ಶಾಂತವ್ವ ನನ್ನ ಅಕ್ಕನ ಬಾಲಮ್ಮನ ಮಗಳು ಎಂದರೆ ಸರಿ. ನನ್ನ ತಮ್ಮ ಅಕ್ಕನ ಮಗಳನ್ನು ಮದುವೆಯಾಗಿದ್ದ ಎಂದರೆ ಸರಿ. ಸದರಿ

ಮದುವೆಯನ್ನು ನಾವೇ ಮಾಡಿಕೊಂಡಿದ್ದೇವೆ. ಸಾಕ್ಷಿಯು ನಿಮ್ಮ ಮದುವೆಯಾವಾಗ ಆಯಿತೆಂದರೆ ಈ ಸಂಬಂಧ ಮದುವೆ ಲಗ್ನಪತ್ರಿಕೆ ಇದೆ, ಎಂದು ಒಂದು ಲಗ್ನಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ಲಗ್ನಪತ್ರಿಕೆಯು ಶಿಥಿಲವಾಗಿರುವುದರಿಂದ ಸದರಿ ದಾಖಲೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಸದರಿ ಮದುವೆ ದಿನಾಂಕ 28.06.1982 ರಂದು ಆಗಿದೆ. ಸದರಿ ದಾಖಲೆ ಶಿಥಿಲವಾಗಿರುವುದರಿಂದ ಅದರ ಝುರಾಕ್ಸ ಪ್ರತಿಯನ್ನು ತೆಗೆದುಕೊಂಡು ಮೂಲ ಪ್ರತಿಯನ್ನು ನಿಪಿ-7 ಎಂದು ಝುರಾಕ್ಸ ಪ್ರತಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನನ್ನ ಸಹೋದರ ನಿಂಗಪ್ಪನಿಗೆ ಪ್ರತಿವಾದಿ 10 ಮತ್ತು 11 ಸಂಬಂಧವಿಲ್ಲ. ಪ್ರತಿವಾದಿ 11 ನನ್ನ ಸಹೋದರ ನಿಂಗಪ್ಪನ ಮಗನಲ್ಲ. ಪ್ರತಿವಾದಿ 10 ನನ್ನ ತಮ್ಮನ ಹೆಂಡತಿಯಲ್ಲ. ನನ್ನ ಅಕ್ಕ ಬಾಲಮ್ಮರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿಯವರು ಪಕ್ಷಗಾರರಲ್ಲದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರ ನಿಂಗಪ್ಪ ಕೆ.ಎಸ್.ಆರ್.ಟಿ.ಸಿ ಯಲ್ಲಿ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನನ್ನ ಸಹೋದರನಿಗೆ ಜಮೀನುಗಳಿಂದ ಮತ್ತು ತನ್ನ ವೃತ್ತಿಯಿಂದ ಸಾಕಷ್ಟು ಆದಾಯವಿತ್ತು ಎಂದರೆ ಸರಿ. ನಾನು ಮತ್ತು ನನ್ನ ಸಹೋದರರು ಜಂಟೀಯಾಗಿ ಒಟ್ಟು ಕುಟುಂಬದಲ್ಲಿದ್ದೆವು ಎಂದರೆ ಸರಿ. ಒಟ್ಟು ಕುಟುಂಬದ ಆದಾಯದಿಂದ ಪ್ಲಾಟ ನಂ-365 ಮತ್ತು 366 ಎರಡು ಪ್ಲಾಟಗಳನ್ನು ನಾನು ಮತ್ತು ನನ್ನ ಸಹೋದರರು ಖರೀದಿಸಿದ್ದೇವೆಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಸಾಮೂಹಿಕ ಕಬ್ಜೆಯಲ್ಲಿವೆ ಎಂದರೆ ಸರಿ . ಪ್ರತಿವಾದಿ 10 ಮತ್ತು 11ರವರು ದಾವಾ ಸ್ವತ್ತುಗಳಲ್ಲಿ ಸಾಮೂಹಿಕ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿ. ಪ್ರತಿವಾದಿ 10 ಮತ್ತು

11 ರವರು ಪ್ರತಿವಾದಿ 8 ಮತ್ತು 9 ರವರಿಗೆ ತಿಳಿಯದ ಹಾಗೆ ಅಸಲು ದಾವಾ ಸಂಖ್ಯೆ-7/2019 ರಲ್ಲಿ ಡಿಕ್ರಿ ಪಡೆದಿದ್ದಾರೆಂದರೆ ಸರಿ. ಸದರಿ ಡಿಕ್ರಿಯನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ಎಂ.ಎಫ್.ಎ ನಂ-10178827/2020 ಸಲ್ಲಿಸಿದ್ದಾರೆಂದರೆ ಸರಿ. ಸದರಿ ಮೇಲ್ಮನವಿ ಚಾಲ್ತಿಯಲ್ಲಿದೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ.

19. ಪ್ರತಿವಾದಿ 1 ರಿಂದ 7 ರವರ ಪರ ವಕೀಲರು ಪಿ.ಡಬ್ಲ್ಯೂ-1 ರವರಿಗೆ ಪಾಟೀ ಸವಾಲು ಮಾಡಿ ಪಾಟೀ ಸವಾಲಿನಲ್ಲಿ ನನ್ನ ತಂದೆಯ ಸಹೋದರರು ಈಶ್ವರಪ್ಪ, ಯಮನೂರಪ್ಪ, ಭೀಮಪ್ಪ ಮತ್ತು ಹನಮಪ್ಪ ಎಂದರೆ ಸರಿ. ಡ ನಂ-1605 ರಲ್ಲಿ ನನ್ನ ತಂದೆಗೆ 11 ಎಕರೆ 36 ಗುಂಟೆ ಬಂದಿದೆ ಎಂದರೆ ಸರಿ. ಸರ್ವೆ ನಂ-145 ರಲ್ಲಿ 7 ಎಕರೆ 9 ಗುಂಟೆಯಲ್ಲಿ ನನ್ನ ತಂದೆ ಮತ್ತು ಅವರ ಸಹೋದರರ ಹೆಸರು ಜಂಟಿಯಾಗಿದೆ ಎಂದರೆ ಸರಿ. ಪ್ಲಾಟ ನಂ-25 ನನ್ನ ಅಣ್ಣಾ ವೀರಭದ್ರಪ್ಪನ ಹೆಸರಿನಲ್ಲಿ ಖರೀದಿಯಾಗಿದೆ ಎಂದರೆ ಸರಿ. ಪ್ಲಾಟ ನಂ-26 ನ್ನು ನಾನು ಖರೀದಿಸಿದ್ದೇನೆ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ತಂದೆಯ ಸಹೋದರರು ಮರಣ ಹೊಂದಿದ್ದರೆಂದರೆ ಸರಿ. ಅವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸರ್ವೆ ನಂ-145 ನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಎಂದು ಸಾಕ್ಷಿ ನುಡಿದಿರುತ್ತಾರೆ.

20. ಈ ದಾವೆಯಲ್ಲಿ ಪ್ರತಿವಾದಿ 4 ರವರು ಸ್ವತಃ ಡಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಗಾಗಿ ಸದರಿಯವರು ಲಿಖಿತ ತಕರಾರಿನ ಸಂಗತಿಗಳನ್ನು ಪುನರುಚ್ಚಿರಿಸಿರುತ್ತಾರೆ. ಸದರಿಯವರು ವಿಚಾರಣಾ ಕಾಲಕ್ಕೆ ನಿಡಿ-4 ರಿಂದ 7 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿದ್ದು, ಅವರು

ತಮ್ಮ ಸಾಕ್ಷ್ಯದಲ್ಲಿ 1ನೇ ಪ್ರತಿವಾದಿ ತನ್ನ ತಾಯಿ ಇದ್ದು, ಪ್ರತಿವಾದಿ 3ರವರು ತನ್ನ ಸಹೋದರನಾಗಿದ್ದು, ಪ್ರತಿವಾದಿ 2, 5 ರಿಂದ 7ರವರು ಸಹೋದರಿಯವರು ಆಗಿರುತ್ತಾರೆ. ಅವರ ಪರವಾಗಿ ಸಾಕ್ಷಿ ನುಡಿದಿದ್ದು, ವಾದಿ ತನ್ನ ಚಿಕ್ಕಪ್ಪನಾಗಿದ್ದು, ತನ್ನ ತಂದೆ ಸಹೋದರರಲ್ಲಿ ನಿಂಗಪ್ಪನಿಗೆ ಶಾಂತವ್ವ ಮತ್ತು ಶೋಭಾ ಎನ್ನುವ ಹೆಂಡತಿ ಮತ್ತು ಮಗಳು ಇರುತ್ತಾರೆ, ಅವರು ದಾವೆಯಲ್ಲಿ ಪ್ರತಿವಾದಿ 8 ಮತ್ತು 9 ಆಗಿರುತ್ತಾರೆ. ತನ್ನ ಅತ್ತೆಯನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸದೇ ಕಾರಣ ದಾವೆಯು ಊರ್ಜಿತವಾಗಿರುವುದಿಲ್ಲ. ದಾವಾ ಶೆಡ್ಯೂಲ್ ಎ ರಲ್ಲಿ ಕಾಣಿಸಿದ ಆಸ್ತಿಗಳಾದ ರೋಣ ಪುರಸಭೆ ವ್ಯಾಪ್ತಿಯಲ್ಲಿರುವ ಬಿನ್ ಶೇತ್ಕಿ ರಿ.ಸ.ನಂ-686/1 ಬಿ ಪೈಕಿ 25ನೇ ಪ್ಲಾಟನ್ನು ತನ್ನ ತಂದೆ ಮೃತ ವೀರಭದ್ರಪ್ಪರವರು ದಿನಾಂಕ 06.07.1994 ರಂದು ನೋಂದಾಯಿತ ಕ್ರಯಪತ್ರದ ಮುಖಾಂತರ ಖರೀದಿಸಿದ್ದು, ಸದರಿ ಆಸ್ತಿಯು ತನ್ನ ತಂದೆಯ ಮರಣ ನಂತರ ಪ್ರತಿವಾದಿ 1 ರಿಂದ 7ರವರು ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ಆಸ್ತಿಯು ತನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಆ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿ 8 ಮತ್ತು 9ರವರಿಗೆ ಯಾವುದೇ ಹಿಸ್ಸೆ ಇರುವುದಿಲ್ಲ. ಆದೇ ರೀತಿ ಬೀನ್ ಶೇತ್ಕಿ ರಿ.ಸ,ನಂ-686/1 ಬಿ ರಲ್ಲಿ ಪ್ಲಾಟ ನಂ-26ನ್ನು ದಿನಾಂಕ 06.071994 ರಂದು ನೋಂದಾಯಿತ ಕ್ರಯಪತ್ರದ ಮುಖಾಂತರ ವಾದಿಯ ಹೆಸರಿನಲ್ಲಿ ಖರೀದಿಸಿದ್ದು, ಈ ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿಯಿಂದ ಬಂದಂತಹ ಆದಾಯದಿಂದ ಖರೀದಿಸಿದ್ದು ಇರುತ್ತದೆ. ಈ ಆಸ್ತಿಯನ್ನು ವಾದಿಯು ಉದ್ದೇಶ ಪೂರ್ವಕವಾಗಿ ದಾವೆಯಲ್ಲಿ ದಾವಾ ಆಸ್ತಿ ಅಂತಾ ಸೇರಿಸಿರುವುದಿಲ್ಲ. ಆದೇ ರೀತಿ ಮೂಲಪುರುಷ ಯಮನಪ್ಪನ ಸಹೋದರರ ನಡುವೆ ಪಾಲು ವಿಭಾಗವಾಗದೆ ಇದ್ದರೂ ಸಹ ಉದ್ದೇಶ

ಪೂರ್ವಕವಾಗಿ ದಾವೆಯಲ್ಲಿ ಸೇರಿಸಿಕೊಂಡಿಲ್ಲ, ಅರಹುಣಸಿ ಗ್ರಾಮದ ರಿ.ಸ.ನಂ-145 ವಿಸ್ತೀರ್ಣ 7 ಎಕರೆ 9 ಗುಂಟೆ ಇರುವ ಆಸ್ತಿಯು ಸಹ ಮೂಲಪುರುಷ ಯಮನಪ್ಪ ಸಹೋದರರ ಹಿಸ್ಸೆಗೆ ಪಾಲುವಾಟ್ನಿಯಂತೆ ಬಂದಿದ್ದು, ಈ ಆಸ್ತಿಯನ್ನು ಸಹ ದಾವೆಯಲ್ಲಿ ಸೇರಿಸದೇ ಇರುವುದರಿಂದ ದಾವೆಯು ಊರ್ಜಿತವಾಗಿರುವುದಿಲ್ಲ. ಮೂಲಪುರುಷ ಮತ್ತು ಆತನ ಸಹೋದರರು ನಡುವೆ 1971 ರಲ್ಲಿ ಪಾಲುವಾಟ್ನಿಯಾಗಿದ್ದು, ಆ ಪ್ರಕಾರ ಅರಹುಣಸಿ ಗ್ರಾಮದ ರಿ.ಸ.ನಂ-242/1+2 ರಲ್ಲಿಯ ವಿಸ್ತೀರ್ಣ 11 ಎಕರೆ 32 ಗುಂಟೆ ಜಮೀನು ಮೂಲಪುರುಷನ ಹಿಸ್ಸೆಗೆ ಬಂದಿದ್ದು, ರಿ.ಸ.ನಂ-145 ಈ ಆಸ್ತಿಯು ಸಾಮೂಹಿಕ ಮಾಲೀಕತ್ವದಲ್ಲಿರುವುದರಿಂದ ಸಹೋದರರ ವಾರಸುದಾರರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸದೇ ದಾವೆಯು ಊರ್ಜಿತವಾಗಿರುವುದಿಲ್ಲ. ಮೂಲಪುರುಷನ ಮಕ್ಕಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ದಾವೆಯಲ್ಲಿ ಸೇರಿಸದೇ ಇದ್ದುದರಿಂದ ದಾವೆಯು ಊರ್ಜಿತವಾಗಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

21. ಈ ಸಾಕ್ಷಿದಾರರಿಗೆ ವಾದಿಯ ಪರ ವಕೀಲರು ಪಾಟೀ ಸವಾಲು ಮಾಡಿದಾಗ ನನ್ನ ಅಜ್ಜ ಮತ್ತು ಅಜ್ಜಿಯ ಹೆಸರು ಯಮನಪ್ಪ ಮತ್ತು ಯಲ್ಲಮ್ಮ ಎಂದರೆ ಸರಿ. ಅವರಿಗೆ 3 ಜನ ಗಂಡ ಮಕ್ಕಳು 1 ಹೆಣ್ಣು ಮಗಳ ಎಂದರೆ ಸರಿ. ನನ್ನ ತಂದೆ ವೀರಭದ್ರಪ್ಪ ಎಂದರೆ ಸರಿ. ನನ್ನ ತಂದೆ ತೀರಿಕೊಂಡಿದ್ದಾರೆಂದರೆ ಸರಿ. ಪ್ರತಿವಾದಿ 1 ರಿಂದ 7 ನಾವುಗಳು ಮಕ್ಕಳು ಎಂದರೆ ಸರಿ. ನನ್ನ ಚಿಕ್ಕಪ್ಪ ನಿಂಗಪ್ಪ ತೀರಿಕೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿ 8 ಹೆಂಡತಿ ಪ್ರತಿವಾದಿ 9 ರವರ ಮಗಳು ಎಂದರೆ ಸರಿ. ದಾವಾ ಸ್ವತ್ತು ವೀರಭದ್ರಪ್ಪ, ಶಿವಾನಂದಪ್ಪ,

ನಿಂಗಪ್ಪರವರ 3 ಜನರ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸರಿ. ನನ್ನ ತಂದೆಯ ಸಹೋದರಿಯಾದ ಬಾಲಮ್ಮರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ, ಕಾರಣ ಅವರು ಹಕ್ಕು ಬಿಟ್ಟು ಕೊಟ್ಟಿದ್ದಾರೆ. ನನ್ನ ತಂದೆ ಮತ್ತು ಅವರ ಸಹೋದರರು ಒಟ್ಟು ಕುಟುಂಬದಲ್ಲಿ ವ್ಯವಸಾಯ ಮಾಡುತ್ತಾ ಬಂದಿದ್ದರು ಎಂದರೆ ಸರಿ. ವಾದಿ ಕೆ.ಎಸ್.ಆರ್.ಟಿ.ಸಿ ಯಲ್ಲಿ ನೌಕರಿ ಮಾಡುತ್ತಿದ್ದಾರೆಂದರೆ ಸರಿ. ವ್ಯವಸಾಯದ ಆದಾಯದಿಂದ ನನ್ನ ತಂದೆ ಎ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ್ದಾರೆಂದರೆ ಸರಿ. ಆದೇ ದಿನ ವಾದಿ ಶಿವಾನಂದಪ್ಪ ತನ್ನ ಆದಾಯದಿಂದ ಒಂದು ನಿವೇಶನವನ್ನು ಖರೀದಿ ಮಾಡಿದ್ದಾನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನ್ನ ತಂದೆ ಅವರ ಸಹೋದರರಿಗೆ ಸಮಾನವಾದ ಪಾಲು ಇದೆ ಎಂದರೆ ಸಾಕ್ಷಿಯು ವ್ಯವಸಾಯದ ಜಮೀನಿನಲ್ಲಿ ಮಾತ್ರ ಪಾಲು ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸಂಬಂಧ ಬೇರೆ ಯಾವುದೇ ನ್ಯಾಯಾಲಯದಲ್ಲಿ ಭಾಗಾಂಶ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಎಂದು ಒಪ್ಪಿಕೊಂಡಿರುತ್ತಾರೆ.

22. ಆದೇ ರೀತಿ ಪ್ರತಿವಾದಿ 8 ಮತ್ತು 9ರವರ ವಕೀಲರ ಪರ ಪಾಟೀ ಸವಾಲು ಮಾಡಿದಾಗ ಬಾಲಮ್ಮ ನನ್ನ ಅತ್ತೆ. ಸದರಿ ಬಾಲಮ್ಮನನ್ನು ಈ ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿಲ್ಲ. ನನ್ನ ತಂದೆ ಯಾವುದೇ ನೌಕರಿ ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಂದೆ ಮತ್ತು ಅವರ ಸಹೋದರರು ಕೂಡಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಆದಾಯು ಒಂದೇ ಕಡೆ ಕ್ರೊಢೀಕರಣವಾಗುತ್ತಿತ್ತು ಎಂದರೆ ಸರಿ. ನನ್ನ ತಂದೆ ಹಿರಿತನ

ಮಾಡುತ್ತಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ನಿಂಗಪ್ಪ ಕೆ.ಎಸ್.ಆರ್.ಟಿ.ಸಿ. ಯಲ್ಲಿ ನೌಕರಿ ಮಾಡುತ್ತಿದ್ದರು ಎಂದರೆ ಸರಿ. ಪ್ಲಾಟ ನಂ-686/1ಎ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಸ್ವತ್ತು ವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಮೇಲ್ಕಂಡ 3 ಸ್ವತ್ತುಗಳಲ್ಲಿಯೂ ಸಹ 3 ಜನರಿಗೂ ಭಾಗಾಂಶದ ಹಕ್ಕು ಇದೆ ಎಂದರೆ ಸರಿ. ಪ್ರತಿವಾದಿ 10 ಮತ್ತು 11 ನಿಂಗಪ್ಪನ ಹೆಂಡತಿ ಮಕ್ಕಳಲ್ಲ ಎಂದರೆ ಸಾಕ್ಷಿಯು ನಮಗೆ ಸಂಬಂಧಿಸಿದ್ದಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 8 ಮತ್ತು 9ರವರು ಮಾತ್ರ ನಿಂಗಪ್ಪರವರ ಹೆಂಡತಿ ಮಕ್ಕಳು ಎಂದರೆ ಸರಿ. ನಿಂಗಪ್ಪ ತನ್ನ ಆದಾಯವನ್ನು ನನ್ನ ತಂದಗೆ ನೀಡುತ್ತಿದ್ದು, ಅದರಿಂದ ನನ್ನ ತಂದೆ ಪ್ಲಾಟನ್ನು ಖರೀದಿಸಿದ್ದಾರೆಂದರೆ ಸರಿ ಒಪ್ಪಿಕೊಂಡಿರುತ್ತಾರೆ.

23. ಈ ದಾವೆಯಲ್ಲಿ ಪ್ರತಿವಾದಿ 8ರವರು ಸ್ವತಃ ಡಿ.ಡಬ್ಲ್ಯೂ-2 ಎಂದು ವಿಚಾರಣೆಗೆ ಒಳಗಾಗಿದ್ದು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ ವಾದಿ ನಮ್ಮ ಮನೆತನಕ್ಕೆ ಸಂಬಂಧಿಸಿದ ಕೆಲವೊಂದು ಆಸ್ತಿಗಳನ್ನು ಬಿಟ್ಟು ದಾವೆಯನ್ನು ಸಲ್ಲಿಸಿರುತ್ತಾರೆ ಆದ್ದರಿಂದ ದಾವೆಯು ಊರ್ಜಿತವಾಗಿರುವುದಿಲ್ಲ. ದಾವಾ ಶೆಡ್ಯೂಲ್ -ಎ ರಲ್ಲಿ ವಾದಿ ತನ್ನ ಹೆಸರಿನಲ್ಲಿರುವ ರಿ.ಸ.ನಂ-636/1ಬಿ61/26 ರಲ್ಲಿಯ ಆಸ್ತಿ ಸಂಖ್ಯೆ-366 ಆಸ್ತಿಯು ಪ್ಲಾಟನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಆಸ್ತಿಯನ್ನು ಖರೀದಿಸಲು ನನ್ನ ಗಂಡ ನಿಂಗಪ್ಪ ಕುರಿ ಹಾಗೂ ಮೃತ ವೀರಭದ್ರಪ್ಪ ಹಾಗೂ ವಾದಿ ಎಲ್ಲರೂ ಸೇರಿ ಎರಡೂ ಕುಟುಂಬದಿಂದ ಬಂದ ಆದಾಯದಿಂದ ಸದರಿ ಆಸ್ತಿಯನ್ನು ಖರೀದಿಸಿರುತ್ತಾರೆ. ಆ ಕಾರಣಕ್ಕೆ ಸದರಿ ಆಸ್ತಿಯು ಪ್ರತಿವಾದಿ 8 ಮತ್ತು 9ರವರಿಗೆ ¼ ಭಾಗಾಂಶ ಇರುತ್ತದೆ. ಮೂಲಪುರುಷ ನಿಂಗಪ್ಪನಿಗೆ ಬಾಳವ್ವ ಅಂತಾ ಹೆಣ್ಣು ಮಗಳು ಇರುತ್ತಾಳೆ.

ಆಕೆಯು ದಾವೆಯಲ್ಲಿ ಪಕ್ಷಗಾರಳು ಇದ್ದು, ಆಕೆಯ ಭಾಗಾಂಶವನ್ನು ಎತ್ತಿ ಹಾಕಲು ವಾದಿ ಮತ್ತು 1ನೇ ಪ್ರತಿವಾದಿಯ ಗಂಡ ಮೃತ ವೀರಭದ್ರಪ್ಪ ಒಬ್ಬರಿಗೊಬ್ಬರು ಷರೀಕಾಗಿ ಡ.ನಂ-2142 ನ್ನು ಕಂದಾಯ ಅಧಿಕಾರಿಗಳೊಂದಿಗೆ ಮಿಲಾಫಿಯಾಗಿ ಖೊಟ್ಟಿಯಾಗಿ ಸೃಷ್ಟಿಸಿಕೊಂಡಿದ್ದು ಇರುತ್ತದೆ. ಪ್ರತಿವಾದಿ 8ರವರು ನಿಂಗಪ್ಪನ ಕಾನೂನು ಬದ್ದ ಹೆಂಡತಿ ಇದ್ದು, ಪ್ರತಿವಾದಿ 9ರವರು ನಿಂಗಪ್ಪನ ಮಗಳಾಗಿರುತ್ತಾಳೆ, ಈ ದಾವೆಯಲ್ಲಿ ಪ್ರತಿವಾದಿ 10 ಮತ್ತು 11 ರವರು ಮೃತ ನಿಂಗಪ್ಪನ ಮಗ ಮತ್ತು ಹೆಂಡತಿ ಇರುತ್ತಾರೆ ಎಂದು ಗೌರವಾನ್ವಿತ ಜಿಲ್ಲಾ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ-7/2019 ಎಂದು ದಾವೆಯನ್ನು ಸಲ್ಲಿಸಿ ಡಿಕ್ರಿ ಪಡೆದುಕೊಂಡಿರುತ್ತಾರೆ. ಸದರಿಯವರು ನಿಂಗಪ್ಪನ ವಾರಸುದಾರರಾಗಿರುವುದಿಲ್ಲ. ಆ ದಾವೆಯಲ್ಲಿ ಪ್ರತಿವಾದಿ 8 ಮತ್ತು 9ರವರ ವಕೀಲರು ಇವರನ್ನು ಸಾಕ್ಷಿದಾರರನ್ನಾಗಿ ಸಾಕ್ಷಿ ಮಾಡಿಸದೇ ವಕೀಲರು ನಮಗೆ ಮೋಸ ಮಾಡಿರುತ್ತಾರೆ. ಆ ಬಗ್ಗೆ ಗೌರವಾನ್ವಿತ ಉಚ್ಚ ನ್ಯಾಯಾಲಯ ಧಾರವಾಡ ಪೀಠ ದಲ್ಲಿ ಎಂ.ಎಫ್.ಎ.ನಂ-101788/2020 ರಂತೆ ಅರ್ಜಿ ಸಲ್ಲಿಸಿ ಅರ್ಜಿಯು ಚಾಲ್ತಿಯಲ್ಲಿರುತ್ತದೆ. ಸದರಿಯವರು ನಮ್ಮ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ, ಆದ್ದರಿಂದ ಎದುರು ದಾವೆಯನ್ನು ಮಾಡಿಸಿಕೊಂಡು ನ್ಯಾಯಾಲಯದಿಂದ ನಿಡಿ-8 ಮತ್ತು 9 ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ.

24. ಈ ಪ್ರತಿವಾದಿಗೆ ಪ್ರತಿವಾದಿ 10 ಮತ್ತು 11ರವರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ನಿಂಗಪ್ಪನ ಹೆಂಡತಿಯ 10ನೇ ಪ್ರತಿವಾದಿ ಶಾಂತವ್ವ ಎಂದರೆ ಸಾಕ್ಷಿಯು ನಾನು ನಿಂಗಪ್ಪನ ಹೆಂಡತಿ ಶಾಂತವ್ವ ಎಂದು

ನುಡಿಯುತ್ತಾರೆ. ನಿಂಗಪ್ಪ ಮತ್ತು 10 ನೇ ಪ್ರತಿವಾದಿಯ ಸಂಬಂಧದಿಂದ 11 ನೇ ಪ್ರತಿವಾದಿ ಆನಂದ ಜನಿಸಿದ್ದಾರೆ ಎಂದರೆ ಸರಿಯಲ್ಲ. ನಿಂಗಪ್ಪ ಕೆ.ಎಸ್.ಆರ್.ಟಿ.ಸಿ ಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಸದರಿ ಕೆ.ಎಸ್.ಆರ್.ಟಿ.ಸಿ ಯವರು 10 ನೇ ಪ್ರತಿವಾದಿ ಮತ್ತು 11 ನೇ ಪ್ರತಿವಾದಿಗೆ ವಾರಸು ಪ್ರಮಾಣ ಪತ್ರ ತರುವಂತೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧ 10 ಮತ್ತು 11 ನೇ ಪ್ರತಿವಾದಿ ಅಸಲು ದಾವಾ ಸಂಖ್ಯೆ-7/2019 ನ್ನು ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ಘೋಷಣಾತ್ಮಕ ಪರಿಹಾರ ಕೋರಿ ನಮ್ಮ ಕೆ.ಎಸ್.ಆರ್.ಟಿ.ಸಿ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿದ್ದೆ ಎಂದರೆ ಸರಿ. ಡಿಕ್ರಿಯಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಡಿಕ್ರಿ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದು ನುಡಿದಿಯುತ್ತಾರೆ ಇದರ ಸಂಬಂಧ ಅಲ್ಲೆಗಳೆದಿರುತ್ತೇನೆ.

25. ಈ ಸಾಕ್ಷಿದಾರರಿಗೆ ವಾದಿಯ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ನಮ್ಮ ತಂದೆ ಹೆಸರು ಲಕ್ಷ್ಮಪ್ಪ ಕುರಿ. ವಾದಿಯರು ಯಾವ ಆಸ್ತಿಗಳ ಬಗ್ಗೆ ಮತ್ತು ಏನೆಂದು ದಾವೆ ಹಾಕಿರುತ್ತಾರೆ ಎಂದರೆ ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಗಳಲ್ಲಿ ವಾದಿಗೆ ಕಾನೂನು ಬದ್ಧ ಹಿಸ್ಸಾ ಇದೆ ಎಂದರೆ ಸಾಕ್ಷಿಯು ಹಾಗಾದರೇ ನನಗೂ ಇದೆ ಎಂದು ನುಡಿಯುತ್ತಾರೆ. ನನಗೆ ದಾವಾ ಆಸ್ತಿಯಲ್ಲಿ ಹಿಸ್ಸಾ ಬರುತ್ತದೆ ಎಂದು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುತ್ತೇನೆ. ಸದರಿ ರಿ.ಸ.ನಂ-636/1 ಬಿ61/26 ಆಸ್ತಿ ಸಂಖ್ಯೆ-366 ಆಸ್ತಿಯು ವೀರಭದ್ರಪ್ಪನ ಹೆಸರಿನಲ್ಲಿರುತ್ತದೆ. ವಾದಿ

ಶಿವಾನಂದಪ್ಪ ಸಾಕಷ್ಟು ವರ್ಷಗಳಿಂದ ಕೆ.ಎಸ್.ಆರ್.ಟಿ.ಸಿ ಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಗಂಡನು ಸಹ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಯಾವ ಇಸ್ವಿಯಲ್ಲಿ ಯಾರ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದರೆ ಹಿರಿಯರಾದ ವೀರಭದ್ರಪ್ಪನ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಸದರಿ ಆಸ್ತಿಯನ್ನು ಖರೀದಿಸಲು ಹಣ ಕೊಟ್ಟಿದ್ದರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿ ಮತ್ತು ನನ್ನ ಗಂಡ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ಒಟ್ಟಿಗೆ ಇದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ.

26. ಈ ದಾವೆಯಲ್ಲಿ ಪ್ರತಿವಾದಿ 11 ರವರು ಸ್ವತಃ ಡಿ.ಡಬ್ಲ್ಯೂ-3 ಎಂದು ವಿಚಾರಣೆಗೆ ಒಳಗಾಗಿ ತಮ್ಮ ಸಾಕ್ಷ್ಯದಲ್ಲಿ ವಾದಪತ್ರದಲ್ಲಿ ಕಾಣಿಸಿರುವ ವರ್ಣನೆ ಸರಿ ಇರುತ್ತದೆ. ಆದರೆ ವಂಶಾವಳಿ ಸರಿ ಇರುವುದಿಲ್ಲ. ಪ್ರತಿವಾದಿ 8 ಮತ್ತು 9 ರವರು ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು ತೋರಿಸಿರುವುದು ಸರಿ ಇರುವುದಿಲ್ಲ. ನಿಂಗಪ್ಪನಿಗೆ ಪ್ರತಿವಾದಿ 10 ಹೆಂಡತಿಯಾಗಿದ್ದು, ಪ್ರತಿವಾದಿ 11 ತಾನು ಮಗ ಇರುತ್ತೇನೆ. ನಾವು ನಿಂಗಪ್ಪನ ಮಗ ಮತ್ತು ಹೆಂಡತಿ ಇರುತ್ತವೆ ಎಂದು ಆತನ ಸರ್ಕಾರಿ ಸೌಲಭ್ಯ ಪಡೆದುಕೊಳ್ಳಲು ವಾರಸು ಪ್ರಮಾಣ ಪಡೆದುಕೊಂಡಿದ್ದ, ಅಲ್ಲದೇ ಎನ್.ಡಬ್ಲ್ಯೂ.ಕೆ.ಆರ್.ಟಿ.ಸಿ ರವರು ಹೆಂಡತಿ ಮತ್ತು ಮಗ ಎಂದು ನ್ಯಾಯಾಲಯದಿಂದ ಆದೇಶವನ್ನು ಪಡೆದುಕೊಂಡು ಬಂದರೆ

ಮಾತ್ರ ಮೃತ ಸೇವಾ ಸೌಲಭ್ಯ ನೀಡುವುದಾಗಿ ತಿಳಿಸಿದ್ದರಿಂದ ಗೌರವಾನ್ವಿತ ಜಿಲ್ಲಾ ನ್ಯಾಯಾಲಯ ಗದಗ ದಲ್ಲಿ ಅಸಲು ದಾವಾ ಸಂಖ್ಯೆ-7/2019 ಎಂದು ದಾವೆ ಸಲ್ಲಿಸಿ, ಸುದಿರ್ಘ ವಿಚಾರಣೆಯಾಗಿ ಆ ದಾವೆಯಲ್ಲಿ ದಿನಾಂಕ 12.02.2020 ರಂದು ಪ್ರತಿವಾದಿ 10 ಮತ್ತು 11 ರವರು ಕಾನೂನು ಬದ್ದ ವಾರಸುದಾರರು ಎಂದು ಡಿಕ್ರಿಯಾಗಿರುತ್ತದೆ. ಈ ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ¼ ಹಿಸ್ಸಾ ಇರುತ್ತದೆ. ಪ್ರತಿವಾದಿ 8 ಮತ್ತು 9 ರವರು ನಿಂಗಪ್ಪನಿಗೆ ವಾರಸುದಾರರ ಅಲ್ಲದೆ ಇರುವ ಬಗ್ಗೆ ಅವರಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಭಾಗಾಂಶ ಇರುವುದಿಲ್ಲ. ಪ್ರತಿವಾದಿ 10 ಮತ್ತು 11 ರವರು ನಿಂಗಪ್ಪನ ಪ್ರಥಮ ದರ್ಜೆಯ ವಾರಸುದಾರರು ಆಗಿರುವುದರಿಂದ ಅವರಿಗೆ ಆತನ ಸೇವಾ ಪುಸ್ತಕದಲ್ಲಿ ತಮ್ಮ ಹೆಸರು ದಾಖಲು ಮಾಡಿರುತ್ತಾನೆ, ಎಲ್ಲಾ ಸರ್ಕಾರಿ ದಾಖಲೆಗಳಲ್ಲಿಯೂ ಸಹ ಪ್ರತಿವಾದಿ 10 ರವರು ನಿಂಗಪ್ಪನ ಹೆಂಡತಿ, ಪ್ರತಿವಾದಿ 11 ರವರು ನಿಂಗಪ್ಪನ ಮಗ ಎಂದು ದಾಖಲಾಗಿರುತ್ತದೆ. ಆದ್ದರಿಂದ ಈ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ ಮತ್ತು ನ್ಯಾಯಾಲಯದ ಮುಂದೆ ನಿಡಿ-10 ಮತ್ತು 11 ದಾಖಲೆಗಳು ಅಸಲು ದಾವಾ ಸಂಖ್ಯೆ-7/2019 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತಾರೆ.

27. ಈ ಸಾಕ್ಷಿದಾರರಿಗೆ ಪ್ರತಿವಾದಿ 1 ರಿಂದ 7 ರವರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ನಮ್ಮ ತಂದೆಯ ಮದುವೆ 10 ನೇ ಪ್ರತಿವಾದಿಯ ಜೊತೆಗೆ 1981 ರಲ್ಲಿ ಆಗಿರುತ್ತದೆ. ಆ ಮದುವೆಯು ಅಬ್ಬಿಗೇರಿಯ ಕಂಠಿಬಸವೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ. ಸಾಕ್ಷಿಗೆ ನಿಡಿ-9 ನ್ನು ತೋರಿಸಿ, ಈ ದಾಖಲೆಯ ಪ್ರಕಾರ ದಿನಾಂಕ 28.06.1982 ರಂದು ವಾದಿ ಮತ್ತು ಮೃತ ನಿಂಗಪ್ಪರವರ

ಮದುವೆಯು ಅಬ್ಬಿಗೇರಿಯ ಕಂಠಿಬಸವೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ನಿಡಿ-8 ರಲ್ಲಿ ನಿಂಗಪ್ಪ, ಶಿವಾನಂದಪ್ಪ ಮತ್ತು ಪ್ರತಿವಾದಿ 8 ರವರು ಇರುತ್ತಾರೆ ಎಂದರೆ ಸಾಕ್ಷಿಯು ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 10 ರವರು ನಿಂಗಪ್ಪನ ಹೆಂಡತಿಯಲ್ಲ ಎಂದರೆ ಸುಳ್ಳು. ವಾರಸಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ವಾರಸಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಅಸಲು ದಾವಾ ಸಂಖ್ಯೆ-7/2019 ರಲ್ಲಿ ಪ್ರತಿವಾದಿ 8 ಮತ್ತು 9 ರವರ ವಿಚಾರಣೆ ಆಗದೆ ಡಿಕ್ರಿಯಾಗಿದ್ದರಿಂದ ಅದರ ವಿರುದ್ಧ ಸದರಿ ಪ್ರತಿವಾದಿಗಳು ಎಂ.ಎಫ್.ಎ.ನಂ-101788/2020 ಅಪೀಲು ಸಲ್ಲಿಸಿದ್ದು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಉಚ್ಚ ನ್ಯಾಯಾಲಯದಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿರುತ್ತೇನೆ. ಪ್ರತಿವಾದಿ 8 ರವರ ಹೆಸರು ಮತ್ತು ಪ್ರತಿವಾದಿ 10 ರವರ ಹೆಸರು ಶಾಂತವ್ವ ಎಂದು ಇದ್ದು, ಆ ಹೆಸರನ್ನು ದುರುಪಯೋಗ ಪಡಿಸಿಕೊಂಡು ನನ್ನ ತಾಯಿ ಶಾಂತವ್ವ ಮೃತ ನಿಂಗಪ್ಪನ ಹೆಂಡತಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ಆಸ್ತಿಗಳ ಸರ್ವೆ ನಂ-242 ಮತ್ತು ಇನ್ನೊಂದು ಆಸ್ತಿ ಇರುತ್ತದೆ ಅದರ ನಂಬರ ನೆನಪಿಲ್ಲ. ಡಿಕ್ರಿಯನ್ನು ಬಿಟ್ಟು ನ್ಯಾಯಾಲಯಕ್ಕೆ ನಾನು ಮತ್ತು ಪ್ರತಿವಾದಿ 10 ರವರು ಮೃತ ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಉಚ್ಚ ನ್ಯಾಯಾಲಯದಲ್ಲಿ ದಾಖಲೆ ಹಾಜರುಪಡಿಸಿರುತ್ತೇನೆ. ಆ ಎರಡು ದಾಖಲೆಗಳು ಯಾವುವು ಎಂದು ನೆನಪಿಲ್ಲ. ಆ ದಾಖಲೆಗಳನ್ನು ತಂದು ಹಾಜರುಪಡಿಸಲು ತೊಂದರೆಯಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

28. ಈ ಸಾಕ್ಷಿದಾರರಿಗೆ ವಾದಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ನನ್ನ ತಂದೆಯ ಹೆಸರು ನಿಂಗಪ್ಪ ಯಮನಪ್ಪ ಕುರಿ. ಡಿ.ಡಬ್ಲ್ಯೂ-2 ರವರು ಶಾಂತವ್ವ ಕುರಿರವರು ನನಗೆ ಸಂಬಂಧ ಇರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯು ಹೆಸರು ಕೂಡ ಶಾಂತವ್ವ ಕುರಿ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಿಕೆಯಲ್ಲಿ ಕಾಣಿಸಿರುವ ಅಸಲು ದಾವಾ ಸಂಖ್ಯೆ-7/2019 ಕ್ಕೂ, ಈ ದಾವೆಯ ವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಕಾನೂನುಬದ್ದವಾದ ಹಿಸ್ಸಾ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ಲಾಟನಲ್ಲಿ ನಮ್ಮ ತಂದೆಗೂ ಸಹ ಹಿಸ್ಸಾ ಇದೆ ಎಂದು ನುಡಿಯುತ್ತಾರೆ. ನಾನು ಕೌಂಟರ್ ಕ್ಲೇಮು ಎಂದು ಹೇಳಿದ್ದು, ಆ ಕೌಂಟ್ ಕ್ಲೇಮು ಏನು ಎಂದು ಹೇಳಲು ಆಗುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

29. ವಾದಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ನಿಪಿ-1 ದಾಖಲೆಯು ಪಹಣಿ ಪತ್ರಿಕೆ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಾವಾ ಶೆಡ್ಯೂಲ್ ಬಿ ಆಸ್ತಿಯು ಎಂ.ಆರ್.ಹೆಚ್ 35/2016-17 ರಂತೆ ಪೌತಿ ಖಾತೆಯ ಮುಖಾಂತರ ಪ್ರತಿವಾದಿ 1 ರಿಂದ 7, ವಾದಿ ಹಾಗೂ ಮೃತ ನಿಂಗಪ್ಪನ ಹೆಸರಿಗೆ ಜಂಟೀ ಖಾತೆ ಇರುತ್ತದೆ ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ. ನಿಪಿ-2 ದಾಖಲೆಯು ದಿನಾಂಕ 06.07.1994 ರ ನೋಂದಾಯಿತ ಕ್ರಯಪತ್ರದ ದೃಢಿಕೃತ ನಕಲು ಇದ್ದು, ಸದರಿ ದಾಖಲೆಯು ದಾವಾ ಐಟಂ ನಂ-1 ಕ್ಕೆ ಸಂಬಂಧಿಸಿದ ದಾಖಲೆಯಾಗಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಪ್ರತಿವಾದಿ 1 ರವರ ಗಂಡನ ಹೆಸರಿಗೆ ಈ ಆಸ್ತಿಯು ಖರೀದಿಯಾಗಿರುತ್ತದೆ ಎಂದು

ಈ ದಾಖಲೆಯಿಂದ ಕಂಡು ಬಂದಿರುತ್ತದೆ. ನಿಪಿ-3 ದಾಖಲೆಯು ಡ.ನಂ-8142 ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಾವಾ ಶೆಡ್ಯೂಲ್ ಬಿ ಆಸ್ತಿಯು ಮೂಲಪುರುಷ ಯಮನಪ್ಪ ನಿಂಗಪ್ಪ ಕುರಿ ಇವರು ದಿನಾಂಕ 09.02.1983 ರಂದು ಮರಣ ಹೊಂದಿದ ನಂತರ ಆತನ ಮಕ್ಕಳಾದ 1) ವೀರಭದ್ರಪ್ಪ 2) ಶಿವಾನಂದಪ್ಪ 3) ನಿಂಗಪ್ಪ ಎನ್ನುವ ಗಂಡ ಮಕ್ಕಳ ಹೆಸರಿಗೆ ವರದಿ ಆಧರಿಸಿ ಖಾತೆಯಾಗಿರುತ್ತದೆ ಎಂದು ಕಂಡು ಬಂದಿರುತ್ತದೆ.

30. ವಾದಿ ಹಾಜರುಪಡಿಸಿರುವ ನಿಪಿ-4 ದಾಖಲೆಯು ಡ.ನಂ-1605 ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ರಿ.ಸ.ನಂ-47/1, 68, ಈ ದಾವೆಯ ಶೆಡ್ಯೂಲ್ ಬಿ ಆಸ್ತಿ ರಿ.ಸ.ನಂ-242/1+2 ಎ, 242/1+2 ಬಿ, 242/1+2, 153/1 ಹಾಗೂ 145 ಆಸ್ತಿಗಳನ್ನು ಮೂಲಪುರುಷ ಯಮನಪ್ಪನ ಸಹೋದರರು ವಿಭಾಗ ಮಾಡಿಕೊಂಡಿದ್ದು, ಸದರಿ ವಿಭಾಗದಲ್ಲಿ ಯಮನಪ್ಪನ ಹಿಸ್ಸಾಗೆ ದಾವಾ ಶೆಡ್ಯೂಲ್ ಬಿ ಆಸ್ತಿಯು ಬಂದಿರುತ್ತದೆ ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ. ನಿಪಿ-5 ದಾಖಲೆಯು ನಿಂಗಪ್ಪರವರ ಮರಣ ಪ್ರಮಾಣ ಪತ್ರ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ನಿಂಗಪ್ಪರವರು ದಿನಾಂಕ 11.05.2008 ರಂದು ಗದಗ-ಬೆಟಗೇರಿ ಸಿ.ಎಸ್.ಐ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ. ನಿಪಿ-6 ದಾಖಲೆಯು ವಾದಿಯ ಆಧಾರ ಕಾರ್ಡ ನಕಲು ಇರುತ್ತದೆ. ನಿಪಿ-7 ದಾಖಲೆಯು ವಾದಿ ಶಿವಾನಂದಪ್ಪ ಮತ್ತು ಆತನ ಸಹೋದರ ನಿಂಗಪ್ಪರವರ ಲಗ್ನ ಪತ್ರಿಕೆ ಇದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ಶಿವಾನಂದಪ್ಪನ ಮದುವೆಯು ನಿಂಗಬಸವ್ವ ಜೊತೆಯಲ್ಲಿ ಹಾಗೂ ಆದೇ ರೀತಿ ಮೂಲಪುರುಷನ 3 ನೇ ಮಗ

ನಿಂಗಪ್ಪನ ಮದುವೆಯು ಶಾಂತವ್ವರವರ ಜೊತೆ ದಿನಾಂಕ 28.06.1982 ರಂದು ಅಬ್ಬಿಗೇರಿಯ ಶ್ರೀ ಕಂಠಿಬಸವೇಶ್ವರ ದೇವಸ್ಥಾನದಲ್ಲಿ ನೆರವೇರಿರುತ್ತದೆ ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ. ನಿಪಿ-7(ಎ) ದಾಖಲೆಯು ನಿಪಿ-7 ರ ಯಥಾ ಪ್ರತಿಯಾಗಿರುತ್ತದೆ. ನಿಪಿ-8 ರಿಂದ 11 ದಾಖಲೆಗಳು ವಾದಿಯ ವೇತನ ಪ್ರಮಾಣ ಪತ್ರ ಇರುತ್ತವೆ. ನಿಪಿ-12 ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ವಾದಿಯು ಬಸಪ್ಪ ಹುಲ್ಲೂರರವರಿಂದ ರಿ.ಸ.ನಂ-686/1 ಬಿ ಪ್ಲಾಟಂ ನಂ-26 ರನ್ನು ಈ ದಾಖಲೆಯ ಮುಖಾಂತರ ಖಾತೆಯಾಗಿತ್ತು ಎಂದು ಕಂಡು ಬಂದಿರುತ್ತದೆ. ನಿಪಿ-13 ದಾಖಲೆಯು ಸ್ವತ್ತಿನ ಸಂಖ್ಯೆ-3666 ನಮೂನೆ-3 ಇದ್ದು, ಈ ಆಸ್ತಿಯು ವಾದಿಯ ಹೆಸರಿನಲ್ಲಿ ಇರುತ್ತದೆ ಎಂದು ಕಂಡು ಬಂದಿರುತ್ತದೆ. ನಿಪಿ-14 ದಾಖಲೆಯು ಸ್ವತ್ತಿನ ಸಂಖ್ಯೆ-3665 ರ ನಮೂನೆ-3 ಇದ್ದು, ಈ ಆಸ್ತಿಯು ಪ್ರತಿವಾದಿ 1 ರಿಂದ 7 ರವರ ಹೆಸರಿಗೆ ಖಾತೆ ಇರುತ್ತದೆ ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ. ನಿಪಿ-15 ದಾಖಲೆಯು ಸ್ವತ್ತಿನ ಸಂಖ್ಯೆ-3665 ರ ಋಣಭಾರ ಪ್ರಮಾಣ ಪತ್ರ ಇರುತ್ತದೆ.

31. ಈ ದಾವೆಯಲ್ಲಿ ಪ್ರತಿವಾದಿ 4 ರವರು ಡಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಗಾಗಿದ್ದು, ಅವರು ತಮ್ಮ ವಿಚಾರಣೆ ಕಾಲಕ್ಕೆ ನಿಡಿ-2 ರಿಂದ 7 ದಾಖಲೆಗಳನ್ನು ಹಾಜರುಪಡಿಸಿದ್ದು, ನಿಡಿ-2 ದಾಖಲೆಯು ದಿನಾಂಕ 06.07.1994 ರ ನೋಂದಾಯಿತ ಖರೀದಿ ಪತ್ರ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ 1 ನೇ ಪ್ರತಿವಾದಿಯ ಗಂಡ ವೀರಭದ್ರಪ್ಪರವರ ಹೆಸರಿಗೆ ದಾವಾ ಶೆಡ್ಯೂಲ್ ಎ ಆಸ್ತಿಯನ್ನು ರೂ.20,000/-ಗಳಿಗೆ ರಿ,ಸ.ನಂ-686/1 ಬಿ ಪ್ಲಾಟಂ ನಂ-25 ನ್ನು ನೋಂದಾಯಿತ ಕ್ರಯಪತ್ರದ ಮುಖಾಂತರ ಖರೀದಿಸಿರುತ್ತಾರೆ ಎಂದು

ಕಂಡು ಬಂದಿರುತ್ತದೆ. ನಿಡಿ-3 ದಾಖಲೆಯು ದಿನಾಂಕ 06.07.1994 ರ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲು ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ, ವಾದಿಯು ಬಸಪ್ಪ ಹುಲ್ಲೂರ ರವರಿಂದ 1 ನೇ ಪ್ರತಿವಾದಿ ಗಂಡ ವೀರಭದ್ರಪ್ಪರವರಿಗೆ ರೂ.20,000/-ಗಳಿಗೆ ರಿ.ಸ.ನಂ-686/1 ಬಿ ಪ್ಲಾಟಂ ನಂ-26 ನ್ನು ನೋಂದಾಯಿತ ಕ್ರಯಪತ್ರದಿಂದ ಖರೀದಿಸಿರುತ್ತಾರೆ ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ.

32. ನಿಡಿ-4 ದಾಖಲೆಯು ರೋಣ ತಾಲ್ಲೂಕಿನ ಅರಹುಣಸಿ ಗ್ರಾಮದ ರಿ,ಸ.ನಂ-145 ರ ಪಹಣಿ ಪತ್ರಿಕೆಯಾಗಿರುತ್ತದೆ. ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಎಂ.ಆರ್.ಹೆಚ್37/2014-15 ರಂತೆ ಮೂಲಪುರುಷ ಯಮನಪ್ಪ ಕುರಿರವರ ಸಹೋದರರಾದ ಈಶ್ವರಪ್ಪ ಮಗನಾದ ರಮೇಶ ದತ್ತಕ ತಂದೆ ಹನಮಪ್ಪ, ಭೀಮಪ್ಪ ತಂದೆ ನಿಂಗಪ್ಪ, ಹನಮಪ್ಪ ತಂದೆ ನಿಂಗಪ್ಪ, ವೀರಭದ್ರಪ್ಪ ತಂದೆ ಚಿದಾನಂದಪ್ಪ, ನಿಂಗಪ್ಪ ತಂದೆ ಯಮನಪ್ಪ ರವರ ಹೆಸರಿಗೆ ರಿ.ಸ.ನಂ-145 ವಿಸ್ತೀರ್ಣ 7 ಎಕರೆ 9 ಗುಂಟೆ ಜಮೀನು ಜಂಟೀ ಖಾತೆ ಇರುತ್ತದೆ ಎಂದು ಕಂಡು ಬಂದಿರುತ್ತದೆ. ನಿಡಿ-5 ದಾಖಲೆಯು ದಿನಾಂಕ 18.06.2020 ನೋಂದಾಣಿ ರಹಿತ ಖರೀದಿ ಸಂಚಗಾರ ಪತ್ರ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಪ್ರತಿವಾದಿ 1 ರಿಂದ 7 ರವರು ರೂ.10,000/-ಗಳಿಗೆ ಗಾಳಪ್ಪ ತಂದೆ ಶಂಕ್ರಪ್ಪ ಗಡಗಿ ರವರಿಗೆ ಮಾರಾಟ ಮಾಡಲು ಒಪ್ಪಿ, ದಾವಾ ಐಟಂ ನಂ-1 ಆಸ್ತಿಗೆ ಸಂಬಂಧಿಸಿದಂತೆ ಈ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ ಎಂದು ಕಂಡು ಬರುತ್ತದೆ. ನಿಡಿ-6 ದಾಖಲೆಯು ದಾವಾ ಐಟಂ ನಂ-1 ರ ನಮೂನೆ 3 ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಪ್ರತಿವಾದಿ 1 ರಿಂದ 7 ರವರ ಹೆಸರಿಗೆ

ಜಂಟೀ ಖಾತೆ ಇರುತ್ತದೆ ಎಂದು ಈ ದಾಖಲೆಯಿಂದ ಕಂಡು ಬರುತ್ತದೆ. ನಿಡಿ-7 ದಾಖಲೆಯು ಡ.ನಂ-1605 ರ ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಮೂಲಪುರುಷ ಯಮನಪ್ಪ ಮತ್ತು ಅವರ ಸಹೋದರರರವರು ವಿಭಾಗ ಮಾಡಿಕೊಂಡಿದ್ದು, ದಾವಾ ಶೆಡ್ಯೂಲ್- ಬಿ ಆಸ್ತಿಯು ಯಮನಪ್ಪರವರ ಹಿಸ್ಸೆಗೆ ದಿನಾಂಕ 08.11.1971 ರಂದು ಬಂದಿರುತ್ತದೆ ಎಂದು ಈ ದಾಖಲೆಯಿಂದ ಕಂಡು ಬರುತ್ತದೆ.

33. ಈ ದಾವೆಯಲ್ಲಿ ಪ್ರತಿವಾದಿ 10 ರವರು ಡಿ.ಡಬ್ಲ್ಯೂ-2 ಎಂದು ವಿಚಾರಣೆಗೆ ಒಳಗಾಗಿದ್ದು, ಅವರು ತಮ್ಮ ವಿಚಾರಣೆ ಕಾಲಕ್ಕೆ ನಿಡಿ-8 ಮತ್ತು 9 ದಾಖಲೆಗಳನ್ನು ಹಾಜರುಪಡಿಸಿದ್ದು, ನಿಡಿ-8 ದಾಖಲೆಯು ಪುರಸಭೆ ರೋಣರವರು ವಾದಿ ಹೆಸರಿನಲ್ಲಿರುವ ರಿ.ಸ.ನಂ-686/1 ಬಿ ಪ್ಲಾಟ ನಂ-26 ಕ್ಕೆ ಸಂಬಂಧಿಸಿದಂತೆ ನೀಡಿರುವ ದಾಖಲೆಯಾಗಿರುತ್ತದೆ. ನಿಡಿ-9 ದಾಖಲೆಯು ವಾದಿ ಮತ್ತು ಆತನ ಸಹೋದರ ನಿಂಗಪ್ಪರವರ ಲಗ್ನ ಪತ್ರಿಕೆ ಇರುತ್ತದೆ, ಈ ದಾಖಲೆಗಳನ್ನು ಡಿ.ಡಬ್ಲ್ಯ್-2 ರವರು ಹಾಜರುಪಡಿಸಿರುತ್ತಾರೆ.

34. ಈ ದಾವೆಯಲ್ಲಿ ಪ್ರತಿವಾದಿ 11 ರವರು ಡಿ.ಡಬ್ಲ್ಯೂ-3 ಎಂದು ವಿಚಾರಣೆಗೆ ಒಳಗಾಗಿದ್ದು, ಅವರು ತಮ್ಮ ವಿಚಾರಣೆ ಕಾಲಕ್ಕೆ ನಿಡಿ-10 ಮತ್ತು 11 ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ಪ್ರತಿವಾದಿ 10 ಮತ್ತು 11 ರವರು ಎನ್.ಡಬ್ಲ್ಯ.ಕೆ.ಆರ್.ಟಿ.ಸಿ ಗದಗ ಹಾಗೂ ಪ್ರತಿವಾದಿ 8 ಮತ್ತು 9 ರವರು ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು ಘೋಷಣೆ ಮಾಡಲು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗದಗ ದಲ್ಲಿ ಅಸಲು ದಾವಾ ಸಂಖ್ಯೆ-7/2019 ಎಂದು ದಾವೆ ಸಲ್ಲಿಸಿದ್ದು, ಸದರಿ

ದಾವೆಯಲ್ಲಿ ಪ್ರತಿವಾದಿ 8 ಮತ್ತು 9ರವರು ಹಾಜರಾಗಿ ಲಿಖಿತ ತಕರಾರು ಸಲ್ಲಿಸಿರುತ್ತಾರೆ ಹಾಗೂ ಸದರಿಯವರು ವಿಚಾರಣೆಗೆ ಒಳಗಾಗಿರುವುದಿಲ್ಲ. ಸದರಿ ದಾವೆಯಲ್ಲಿ ಡಿಕ್ರಿಯಾಗಿ ಪ್ರತಿವಾದಿ 10 ಮತ್ತು 11 ರವರು ಮೃತ ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು ತೀರ್ಮಾನವಾಗಿರುತ್ತದೆ ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ.

35. ಈ ಮೇಲಿನ ವಾದಿ ಮತ್ತು ಪ್ರತಿವಾದಿ 4, 8 ಹಾಗೂ 11ರವರು ಸಾಕ್ಷ್ಯವನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ವಾದಿಯು ರೋಣ ನಗರದ ರಿ.ಸ.ನಂ-686/1 ಬಿ ಪೈಕಿ ಪ್ಲಾಟಂ ನಂ-25 ಹಾಗೂ ದಾವಾ ಬಿ ಶೆಡ್ಯೂಲ್ ಆಸ್ತಿಯು ಪಿತ್ರಾರ್ಜಿತ ಆಸ್ತಿಗಳಾಗಿರುತ್ತದೆ, ದಾವಾ ಶೆಡ್ಯೂಲ್-ಬಿ ಆಸ್ತಿಯು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಯಾಗಿರುತ್ತದೆ ಎಂದು ತಮ್ಮ ವಾದಪತ್ರದಲ್ಲಿ ತಿಳಿಸಿರುತ್ತಾರೆ. ಆದರೆ ಪ್ರತಿವಾದಿ 1 ರಿಂದ 7 ರವರು ವಾದಿ ಹೆಸರಿಗೆ ದಿನಾಂಕ 06.07.1994 ಪ್ಲಾಟಂ ನಂ-26ನ್ನು ಖರೀದಿಸಲಾಗಿದ್ದು, ಸದರಿ ಆಸ್ತಿಯು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಯಾಗಿದ್ದು, ಆ ಆಸ್ತಿಯನ್ನು ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ, ಮೂಲಪುರುಷನ ಸಹೋದರರ ಯಮನಪ್ಪನ ಹೆಸರಿನಲ್ಲಿ ಸರ್ವೆ ನಂ-145 ಆಸ್ತಿಯು ಜಂಟೀ ಖಾತೆಯಾಗಿರುತ್ತದೆ, ಸದರಿ ಆಸ್ತಿಗಳನ್ನು ಸೇರ್ಪಡೆ ಮಾಡಿರುವುದಿಲ್ಲ. ದಾವಾ ಐಟಂ ನಂ-1 ಆಸ್ತಿಯನ್ನು ಪ್ರತಿವಾದಿ 1ರವರ ಗಂಡನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ದಾವಾ ಶೆಡ್ಯೂಲ್-ಬಿ ಆಸ್ತಿ ಮಾತ್ರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ತಿಳಿಸಿದ್ದು, ಈ ದಾವೆಯಲ್ಲಿ ಪ್ರತಿವಾದಿ 8 ಮತ್ತು 9ರವರು ವಾದಿ ಹೆಸರಿನಲ್ಲಿರುವ ಪ್ಲಾಟಂ ನಂ-26ನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ,

ಪ್ರತಿವಾದಿ 1 ರವರ ಗಂಡ ಹಾಗೂ ವಾದಿ ಹೆಸರಿನಲ್ಲಿ ಖರೀದಿಯಾಗಿರುವ ಪ್ಲಾಟಂ ನಂ-25 ಮತ್ತು 26 ಆಸ್ತಿಗಳು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಯಾಗಿರುತ್ತವೆ, ಪ್ರತಿವಾದಿ 8 ಮತ್ತು 9 ರವರು ಮೃತ ನಿಂಗಪ್ಪನ ವಾರಸುದಾರರು ಇರುವುದರಿಂದ ಸದರಿ ಆಸ್ತಿಯಲ್ಲಿ ಭಾಗಾಂಶ ಬೇಕೆಂದು ಕೋರಿಕೊಂಡಿರುತ್ತಾರೆ. ಆದೇ ರೀತಿ ಪ್ರತಿವಾದಿ 10 ಮತ್ತು 11 ರವರು ಮೃತ ನಿಂಗಪ್ಪನ ಹಿಸ್ಸಾಗೆ ಬರುವ ಆಸ್ತಿಯಲ್ಲಿ ಪ್ರತಿವಾದಿ 10 ಮತ್ತು 11 ರವರ ಹೆಂಡತಿ ಮತ್ತು ಮಗ ಇರುವುದರಿಂದ ಭಾಗಾಂಶ ಪಡೆದುಕೊಳ್ಳಲು ಅರ್ಹರಿರುತ್ತಾರೆ ಎಂದು ದಾವೆಯಲ್ಲಿ ಪ್ರತಿವಾದ ತೆಗೆದುಕೊಂಡಿದ್ದು ಇರುತ್ತದೆ.

36. ಈ ದಾವೆಯಲ್ಲಿ ಉಭಯ ಪಕ್ಷಗಾರರು ಒಪ್ಪಿಕೊಂಡಿರುವ ಪ್ರಕಾರ ದಾವಾ ಶೆಡ್ಯೂಲ್-ಬಿ ಆಸ್ತಿಯು ವಾದಿ ಮತ್ತು ಪ್ರತಿವಾದಿಗಳು ಪಿತ್ರಾರ್ಜಿತ ಆಸ್ತಿಯಾಗಿತ್ತು ಎನ್ನುವ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಆದರೆ ವಾದಿಯು ತನ್ನ ಸಾಕ್ಷ್ಯದಲ್ಲಿ ದಾವಾ ಎ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಇದ್ದು, ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ಪ್ರತಿವಾದಿ 1 ರವರು ಗಂಡ ವೀರಭದ್ರಪ್ಪರವರ ಹೆಸರಿಗೆ ಖರೀದಿಸಿರುತ್ತಾರೆ, ನಿಪಿ-2 ಹಾಗೂ ನಿಡಿ-2 ದಾಖಲೆಗಳ ಮುಖಾಂತರ ಆತನ ಹೆಸರಿಗೆ ಖರೀದಿಸಿದ ಆಸ್ತಿಯಾಗಿರುವುದರಿಂದ, ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ವಾದಿಯು ತಮ್ಮ ದಾವೆಯಲ್ಲಿ ತಿಳಿಸಿರುತ್ತಾರೆ. ಆದೇ ರೀತಿ ಪ್ರತಿವಾದಿ 1 ರಿಂದ 7 ರವರು ಈ ಆಸ್ತಿಯು 1 ನೇ ಪ್ರತಿವಾದಿಯ ಗಂಡ ಮೃತ ವೀರಭದ್ರಪ್ಪರವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ಪ್ರತಿವಾದವನ್ನು ತೆಗೆದುಕೊಂಡಿರುತ್ತಾರೆ. ಆದರೆ ಪ್ರತಿವಾದಿ 1 ರಿಂದ 7 ಹಾಗೂ ಪ್ರತಿವಾದಿ 8 ಮತ್ತು 9 ರವರು ವಾದಿಯ ಹೆಸರಿಗೆ

ಖರೀದಿಯಾಗಿರುವ ಪ್ಲಾಟಂ ನಂ-26 ಸಹ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಯಾಗಿದ್ದು, ತಮಗೂ ಸಹ ಸದರಿ ಆಸ್ತಿಯಲ್ಲಿ ಹಿಸ್ಸೆ ಇರುತ್ತದೆ. ಪ್ರತಿವಾದಿ 1 ರಿಂದ 9 ರವರು ಎದುರು ದಾವೆ ಮಾಡಿದ್ದು ಇರುತ್ತದೆ. ಆದರೆ ಪ್ರತಿವಾದಿ 1 ರಿಂದ 9 ರವರು ದಾವಾ ಶೆಡ್ಯೂಲ್-ಬಿ ಆಸ್ತಿಯಿಂದ ವಾರ್ಷಿಕವಾಗಿ ಎಷ್ಟು ಆದಾಯ ಇತ್ತು, ಎಷ್ಟು ಖರ್ಚು ಆಗುತ್ತಿತು, ಎಷ್ಟು ಹಣ ಉಳಿತಾಯವಾಗುತ್ತಿತ್ತು ಎನ್ನುವುದರ ಬಗ್ಗೆ ಯಾವುದೇ ಲೆಕ್ಕ ಪತ್ರದ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಆದರೆ 1 ನೇ ಪ್ರತಿವಾದಿ ಗಂಡ ಮೃತ ವೀರಭದ್ರರವರು ದಾವಾ ಶೆಡ್ಯೂಲ್ ಬಿ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ, ವಾದಿಯು ಕೆ.ಎಸ್.ಆರ್.ಟಿ.ಸಿ ಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುತ್ತಾರೆ, ದಾವಾ ಶೆಡ್ಯೂಲ್ ಬಿ ಆಸ್ತಿಯ ವಿಸ್ತೀರ್ಣವನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ಸದರಿ ಆಸ್ತಿಯು 11 ಎಕರೆ 31 ಗುಂಟೆ ಜಮೀನು ಇದ್ದು, ಈಗ ಸದರಿ ಆಸ್ತಿಯು ನಿಪಿ-1 ದಾಖಲೆಯಂತೆ ಪ್ರತಿವಾದಿ 1 ರಿಂದ 7 ಮತ್ತು ವಾದಿಯ ಹೆಸರಿಗೆ ಜಂಟಿಯಾಗಿರುತ್ತದೆ. 1 ನೇ ಪ್ರತಿವಾದಿ ಗಂಡ ಮೃತ ವೀರಭದ್ರಪ್ಪರವರು ಈ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಾ ಬಂದಿದ್ದು, ಆ ಆಸ್ತಿಯಿಂದ ಮೃತ ವೀರಭದ್ರಪ್ಪನಿಗೆ ಆದಾಯ ಬಂದಿರುತ್ತಿತ್ತು ಎಂದು ಕಂಡು ಬಂದಿರುತ್ತದೆ. ಪ್ರತಿವಾದಿ 1 ರಿಂದ 7 ರವರು ಮೃತ ವೀರಭದ್ರಪ್ಪರವರಿಗೆ ದಾವಾ ಶೆಡ್ಯೂಲ್ - ಎ ಆಸ್ತಿಯನ್ನು ಖರೀದಿಸಲು ಯಾವ ಮೂಲದಿಂದ ಎಷ್ಟು ಆದಾಯ ಇತ್ತು ಎಂದು ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ, ಮೃತ ವೀರಭದ್ರಪ್ಪರವರಿಗೆ ಆದಾಯದ ಮೂಲ ಶೆಡ್ಯೂಲ್-ಬಿ ಯಿಂದ ಮಾತ್ರ ಇತ್ತು

ಎಂದು ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ.

37. ಈ ಹಂತದಲ್ಲಿ ನ್ಯಾಯಾಲಯವು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಪರಿಶೀಲಿಸಲಾಗಿ, ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಆದೇ ರೀತಿ ಪ್ರತಿವಾದಿ 8 ಮತ್ತು 9 ರವರ ಪರ ವಕೀಲರು ಪಾಟೀ ಸವಾಲು ಮಾಡಿದಾಗ, ವಾದಿಯು ದಾವೆಯಲ್ಲಿ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು, ದಾವಾ 1 ಎ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ 1 ನೇ ಪ್ರತಿವಾದಿಯ ಗಂಡನ ಹೆಸರಿಗೆ ಖರೀದಿಸಲಾಗಿರುತ್ತದೆ, ದಾವಾ ಬಿ ಶೆಡ್ಯೂಲ್ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು, ಪ್ರತಿವಾದಿ 1 ರಿಂದ 7 ರವರ ಪರ ವಿಚಾರಣೆ ಒಳಗಾಗಿರುವ ಪ್ರತಿವಾದಿ 4 ರವರು ದಾವಾ ಶೆಡ್ಯೂಲ್-ಎ ಆಸ್ತಿಯನ್ನು ತನ್ನ ತಂದೆ ಸ್ವಂತ ಆದಾಯದಿಂದ ಖರೀದಿಸಿದ ಆಸ್ತಿಯಾಗಿದ್ದು, ಆತನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಆತನ ಮರಣದ ನಂತರ ಪ್ರತಿವಾದಿ 1 ರಿಂದ 7 ರವರ ಜಂಟೀ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ತಿಳಿಸಿದ್ದು, ಈ ಹಂತದಲ್ಲಿ ನ್ಯಾಯಾಲಯವು ಡಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ವ್ಯವಸಾಯ ಆದಾಯದಿಂದ ನನ್ನ ತಂದೆ ಎ ಶೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಆತನು ಬಿ ಶೆಡ್ಯೂಲ್ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದು, ಆದರಿಂದ ಬಂದ ಆದಾಯವನ್ನು ಕ್ರೂಢೀಕರಣ ಆಗಿದ್ದರಿಂದ ಹಾಗೂ ಆತನೆ ಮನೆಯಲ್ಲಿ ಹಿರಿತನ ಮಾಡುತ್ತಿದ್ದದನ್ನು ಎಂದು ಒಪ್ಪಿಕೊಂಡಿರುವುದನ್ನು ಗಮನಿಸಿದಾಗ ದಾವಾ ಶೆಡ್ಯೂಲ್ ಬಿ ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿಯಾಗಿದ್ದು ದಾವಾ ಶೆಡ್ಯೂಲ್ ಎ

ಆಸ್ತಿಯನ್ನು ಮೃತ ವೀರಭದ್ರಪ್ಪರವರು ದಾವಾ ಬಿ ಶೆಡ್ಯೂಲ್ ಆಸ್ತಿಯಿಂದ ಬಂದ ಆದಾಯದಿಂದ ಮತ್ತು ಮೃತ ನಿಂಗಪ್ಪರವರು ಕೆ.ಎಸ್.ಆರ್.ಟಿ.ಸಿ ಯಲ್ಲಿ ಬಸ್ ಕಂಡಕ್ಟರ್ ಕೆಲಸ ಮಾಡುತ್ತಿದ್ದು, ಆತನ ನೀಡಿದ ಹಣದಿಂದ ಈ ಆಸ್ತಿಯನ್ನು ಖರೀದಿಸಿದ್ದು, ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ.

38. ಈ ದಾವೆಯಲ್ಲಿ ಪ್ರತಿವಾದಿ 1 ರಿಂದ 7 ರವರು ವಾದಿ ಹೆಸರಿಗೆ ದಿನಾಂಕ 06.07.1994 ರಂದು ಪ್ಲಾಟ ನಂ-26 ನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿಯಾಗಿರುತ್ತದೆ. ಆದೇ ರೀತಿ ರಿ.ಸ.ನಂ-145 ರಲ್ಲಿ 7 ಎಕರೆ 9 ಗುಂಟೆ ಜಮೀನನ್ನು ಸಹ ಮೂಲಪುರುಷ ಯಮನಪ್ಪರವರ ಸಹೋದರರ ಹೆಸರಿನಲ್ಲಿ ಜಂಟೀ ಖಾತೆಯು ಯಮನಪ್ಪನ ಅವನ ಸಹೋದರರಿಗೆ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದರಲ್ಲಿ ಹಿಸ್ಸೆ ಇರುತ್ತದೆ, ಈ ಆಸ್ತಿಯನ್ನು ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ. ಹಾಗೂ ಮೂಲಪುರುಷನ ಯಮನಪ್ಪನ ಸಹೋದರರು ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿದ್ದು, ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಪ್ರತಿವಾದವನ್ನು ತೆಗೆದುಕೊಂಡಿರುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿ 8 ರಿಂದ 11 ರವರು ಎದುರು ದಾವೆ ಮಾಡಿ ಸದರಿ ಆಸ್ತಿಗಳಲ್ಲಿ ತಮಗೂ ಸಹ ಭಾಗಾಂಶ ಇರುತ್ತದೆ ಎಂದು ತಿಳಿಸಿದ್ದು, ಈ ಹಂತದಲ್ಲಿ ನ್ಯಾಯಾಲಯವು ಡಿ.ಡಬ್ಲ್ಯೂ-1 ರಿಂದ 3 ರವರು ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುವ ಸಂಗತಿಗಳನ್ನು ನ್ಯಾಯಾಲಯವು ಸೂಕ್ಷ್ಮವಾಗಿ

ಪರಿಶೀಲಿಸಲಾಗಿ ವಾದಿಯು ಕೆ.ಎಸ್.ಆರ್.ಟಿ.ಸಿ ಯಲ್ಲಿ ಕೆಲಸ ಮಾಡುತ್ತಿದ್ದು, ಆತನಿಗೆ ಸಾಕಷ್ಟು ಆದಾಯ ಇದ್ದು, ಆತನು ತನ್ನ ಆದಾಯದಲ್ಲಿ ದಾವಾ ಶೆಡ್ಯೂಲ್ ಎ ಆಸ್ತಿಯನ್ನು ವೀರಭದ್ರಪ್ಪ ಕುರಿರವರ ಹೆಸರಿಗೆ ಖರೀದಿಸಿ, ಅದೇ ದಿನಾಂಕದಂದು ವಾದಿ ತನ್ನ ಹೆಸರಿಗೆ ನಿಪಿ-12 ರಂತೆ ದಾಖಲೆಯಂತೆ ಪ್ಲಾಟ ನಂ-26 ನ್ನು ಖರೀದಿಸಿದ್ದು, ಸದರಿ ಆಸ್ತಿಯು ಆತನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ನ್ಯಾಯಾಲಯಕ್ಕೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ನಿಪಿ-12 ರಲ್ಲಿ ನಮೂದಿಸಿರುವ ಪ್ಲಾಟ ನಂ-26 ನ್ನು ಖರೀದಿಸಲು ಪ್ರತಿವಾದಿಯರು ವಾದಿಗೆ ಹಣಕಾಸಿನ ಸಹಾಯ ಮಾಡಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆ ಕಾರಣಕ್ಕಾಗಿ ಪ್ರತಿವಾದಿಗಳು ನಿಪಿ-12 ರಂತೆ ಆಸ್ತಿಯು ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಲ್ಲಿ ಖರೀದಿಸಿರುವ ಆಸ್ತಿಯಾಗಿತ್ತು ಎಂದು ನ್ಯಾಯಾಲಯವು ಪರಿಗಣಿಸಿರುವುದಿಲ್ಲ.

39. ಈ ದಾವೆಯಲ್ಲಿ ವಾದಿಯು ಹಾಜರುಪಡಿಸಿರುವ ನಿಪಿ-8 ರಿಂದ 11 ದಾಖಲೆಗಳು ವಾದಿಯ ವೇತನ ಪ್ರಮಾಣ ಪತ್ರ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಿದಾಗಲೂ ಸಹ ವಾದಿಯು ಕೆ.ಎಸ್.ಆರ್,ಟಿ.ಸಿ ಯಲ್ಲಿ ನೌಕರಿ ಮಾಡುತ್ತಿದ್ದರಿಂದ ಆತನಿಗೆ ಆದಾಯ ಇತ್ತು ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ. ಪ್ರತಿವಾದಿಗಳು ಪ್ಲಾಟ ನಂ-26 ಆಸ್ತಿಯನ್ನು ದಿನಾಂಕ 06.07.1994 ರಲ್ಲಿ ನಿಪಿ-12 ದಾಖಲೆಯ ಮುಖಾಂತರ ವಾದಿ ಹೆಸರಿಗೆ ಖರೀದಿಸಿರುವುದರಿಂದ ಈ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ಮೌಖಿಕವಾಗಿ ಸಾಕ್ಷಿ ನುಡಿದ ಮಾತ್ರಕ್ಕೆ ಈ ಆಸ್ತಿಯು ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ಖರೀದಿಸಿರುವ

ಆಸ್ತಿಯಾಗಿರುತ್ತದೆ ಎಂದು ನ್ಯಾಯಾಲಯವು ಪರಿಗಣಿಸಲು ಸಾಧ್ಯವಿಲ್ಲ.

40. ಈ ದಾವೆಯು ಅರಹುಣಸಿ ಗ್ರಾಮದ ರಿ,ಸ.ನಂ-145 ರಲ್ಲಿ ವಿಸ್ತೀರ್ಣ 7 ಎಕರೆ 9 ಗುಂಟೆ ಆಸ್ತಿಯು ಮೂಲಪುರುಷ ಯಮನಪ್ಪರವರ ಸಹೋದರರ ಹಿಸ್ಸೆಗೆ ಬಂದಿದ್ದು, ಸದರಿ ಆಸ್ತಿಯು ಸಹ ಪಿತ್ರಾರ್ಜಿತ ಆಸ್ತಿಯಾಗಿದ್ದು ಎಂದು ಪ್ರತಿವಾದಿಗಳು ಪ್ರತಿವಾದ ತೆಗೆದುಕೊಂಡು ನಿಡಿ-4 ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ಆದರೆ ಈ ಹಂತದಲ್ಲಿ ನ್ಯಾಯಾಲಯವು ನಿಪಿ-3 ಹಾಗೂ ನಿಡಿ-7 ದಾಖಲೆಗಳನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಡ.ನಂ-1605 ರಂತೆ ಮೂಲಪುರುಷ ಯಮನಪ್ಪ ಮತ್ತು ಆತನ ಸಹೋದರರು ವಿಭಾಗ ಮಾಡಿಕೊಂಡಾಗ, ಸದರಿ ವಿಭಾಗದಂತೆ ಕೇವಲ ದಾವಾ ಶೆಡ್ಯೂಲ್ ಬಿ ಆಸ್ತಿ ಮಾತ್ರ ಮೂಲಪುರುಷ ಯಮನಪ್ಪನ ಹಿಸ್ಸೆಗೆ ಬಂದಿರುತ್ತದೆ ಎಂದು ಸ್ಪಷ್ಟವಾಗಿ ಈ ದಾಖಲೆಯಿಂದ ಕಂಡು ಬಂದಿರುತ್ತದೆ. ಪ್ರತಿವಾದಿಗಳು ಸ.ನಂ-145 ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿ ಆಸ್ತಿಯಲ್ಲಿ ತಮಗೂ ಸಹ ಹಿಸ್ಸೆ ಇದೆ ಎಂದು ಹೇಳಿದ ಮಾತ್ರಕ್ಕೆ ಸದರಿಯವರ ಸಾಕ್ಷ್ಯವನ್ನು ನ್ಯಾಯಾಲಯವು ಪರಿಗಣಿಸಿ, ಸದರಿ ಆಸ್ತಿಯಲ್ಲಿ ಸಹ ವಾದಿ ಮತ್ತು ಪ್ರತಿವಾದಿಗಳಿಗೆ ಹಿಸ್ಸಾ ಇರುತ್ತದೆ ಎಂದು ನ್ಯಾಯಾಲಯ ಪರಿಗಣಿಸಿ ಹಿಸ್ಸೆ ನೀಡಲು ಸಾಧ್ಯವಿಲ್ಲ.

41 ವಾದಿಯು ನ್ಯಾಯಾಲಯದ ಮುಂದೆ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಜಂಟೀ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷಿ ಮುಖಾಂತರ ರುಜುವಾತುಪಡಿಸಿರುತ್ತಾರೆ, ಪ್ರತಿವಾದಿ 1 ರಿಂದ 7 ರವರು ದಾವಾ ಎ ಶೆಡ್ಯೂಲ್ ಆಸ್ತಿಯು ಮೃತ ವೀರಭದ್ರಪ್ಪನ ಸ್ವಯಾರ್ಜಿತ ಆಸ್ತಿಯಾಗಿತ್ತು ಎಂದು ಮೌಖಿಕ ಹಾಗೂ ದಾಖಲೆಗಳ ಮುಖಾಂತರ

ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

42. ವಾದಿ ತನ್ನ ಸಾಕ್ಷ್ಯದಲ್ಲಿ ಮೂಲಪುರುಷ ಯಮನಪ್ಪ ಕುರಿರವರಿಗೆ ಯಲ್ಲಮ್ಮ ಎನ್ನುವ ಹೆಂಡತಿ ಇದ್ದು, ಅವರುಗಳು ಮರಣ ಹೊಂದಿದ್ದು ಅವರಿಗೆ 1) ವೀರಭದ್ರಪ್ಪ 2) ಶಿವಾನಂದಪ್ಪ 3) ನಿಂಗಪ್ಪ 4) ಬಾಲಮ್ಮ ಎನ್ನುವ 4 ಜನ ಮಕ್ಕಳಿದ್ದು, ಅವರಲ್ಲಿ ವೀರಭದ್ರಪ್ಪ ಮತ್ತು ನಿಂಗಪ್ಪನ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ. ಅದರೆ ತನ್ನ ದಾವೆ ಹಾಗೂ ಸಾಕ್ಷ್ಯದಲ್ಲಿ ಬಾಲಮ್ಮರವರು ದಿನಾಂಕ 20.10.1983 ರಂತೆ ನೀಡಿದ ವರದಿ ಆಧರಿಸಿ ಡ.ನಂ-2341 ರಂತೆ ಆಕೆಯು ದಾವಾ ಆಸ್ತಿಗಳಲ್ಲಿ ತಮ್ಮ ಹಕ್ಕುನ್ನು ಬಿಟ್ಟುಕೊಟ್ಟಿರುತ್ತಾಳೆ ಎಂದು, ಆ ಕಾರಣಕ್ಕಾಗಿ ಆಕೆಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಆದೇ ರೀತಿ ಪ್ರತಿವಾದಿ 1 ರಿಂದ 7 ರವರು ತನ್ನ ಲಿಖಿತ ತಕರಾರು ಹಾಗೂ ಸಾಕ್ಷ್ಯದಲ್ಲಿ ಮೂಲಪುರುಷ ಯಮನಪ್ಪನ ಮಗಳಾದ ಬಾಳಮ್ಮರವರನ್ನು ಅವಶ್ಯಕ ಪಕ್ಷಗಾರರನ್ನಾಗಿ ಮಾಡದೆ ಇರುವುದರಿಂದ ದಾವೆಯು ಊರ್ಜಿತವಾಗಿರುವುದಿಲ್ಲ ಎಂದು ಪ್ರತಿವಾದಿ 1 ರಿಂದ 7 ರವರ ಪರವಾಗಿ ಸಾಕ್ಷಿ ನುಡಿದಿರುವ ಡಿ.ಡಬ್ಲ್ಯೂ-1 ರವರು ಸಾಕ್ಷಿ ನುಡಿದಿದ್ದು ಇರುತ್ತದೆ, ಆದರೆ ಪ್ರತಿವಾದಿ 8 ಮತ್ತು 9 ರವರು 1983 ರಲ್ಲಿ ಬಾಳಮ್ಮರವರು ದಾವಾ ಆಸ್ತಿಯಗಳಲ್ಲಿ ತಮ್ಮ ಹಿಸ್ಸಾ ಬಿಟ್ಟುಕೊಟ್ಟಿರುತ್ತಾರೆ ಎಂದು ಸುಳ್ಳುನಿಂದ ಕೂಡಿರುತ್ತದೆ ಎಂದು ಪ್ರತಿವಾದ ತೆಗೆದುಕೊಂಡಿದ್ದು, ಅದಕ್ಕೆ ಅನುಗುಣವಾಗಿ ಪ್ರತಿವಾದಿ 8 ರವರು ಸಾಕ್ಷಿ ನುಡಿದಿರುತ್ತಾರೆ. ಈ ರೀತಿ ವಾದಿ ಮತ್ತು ಪ್ರತಿವಾದಿ 1 ರಿಂದ 8 ರವರು ದಾವೆಯಲ್ಲಿ ತೆಗೆದುಕೊಂಡ ನಿಲುವನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಪರಿಶೀಲಿಸಲಾಗಿ ಮೂಲಪುರುಷ ಯಮನಪ್ಪ ಮತ್ತು ಆತನ

ಹೆಂಡತಿ ಯಲ್ಲಮ್ಮರವರು ಮಕ್ಕಳಾದ 1) ವೀರಭದ್ರಪ್ಪ 2) ಶಿವಾನಂದ 3) ನಿಂಗಪ್ಪ 4) ಬಾಳಮ್ಮ ಎನ್ನುವ 4 ಜನ ಮಕ್ಕಳಿದ್ದು, ಅವರುಗಳಲ್ಲಿ 1 ನೇ ಮಗ ವೀರಭದ್ರಪ್ಪ ಮತ್ತು 3 ನೇ ಮಗ ನಿಂಗಪ್ಪರವರು ಮರಣ ಹೊಂದಿರುತ್ತಾರೆ. ಬಾಳಮ್ಮರವರು ಸಹ ಮೂಲಪುರುಷ ಯಮನಪ್ಪನ ಮಗಳಾಗಿದ್ದು, ಆಕೆಯನ್ನು ಪಕ್ಷಗಾರರನ್ನಾಗಿ ದಾವೆಯಲ್ಲಿ ಸೇರ್ಪಡೆ ಮಾಡದೆ ಇರುವುದನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ವಾದಿಯು ದಾವಾಯಲ್ಲಿ ತಿಳಿಸಿದ ವಂಶವೃಕ್ಷ ಸರಿಯಿರುವುದಿಲ್ಲ ಎಂದು ಕಂಡು ಬಂದಿರುತ್ತದೆ. ಆದರೆ ಸದರಿ ಬಾಳಮ್ಮರವರು ಸ್ವತಃ ದಿನಾಂಕ 30.10.2024 ರಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ - 20 ನ್ನು ಸಲ್ಲಿಸುವ ಮುಖಾಂತರ ಸದರಿ ಬಾಳಮ್ಮರವರು ಪ್ರತಿವಾದಿ 12 ಎಂದು ದಾವೆಯಲ್ಲಿ ಅರ್ಜಿಯನ್ನು ಆಧರಿಸಿ ಕಡತದ ಮೇಲೆ ಬಂದಿರುತ್ತಾರೆ. ಆದರೆ ವಾದಿಯೇ ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡದೆ ಇರುವುದರಿಂದ ವಾದಿಯು ವಾದಪತ್ರದೊಂದಿಗೆ ಸಲ್ಲಿಸಿದ ವಂಶವೃಕ್ಷ ಸರಿ ಇರುವುದಿಲ್ಲ. ಆದ್ದರಿಂದ **ವಿವಾದಾಂಶ 1 ಕ್ಕೆ ಸಕಾರಾತ್ಮಕವಾಗಿ ಮತ್ತು ವಿವಾದಾಂಶ 2 ಕ್ಕೆ ನಕಾರಾತ್ಮಕವಾಗಿ, ಹಾಗೂ ವಿವಾದಾಂಶ 3 ಕ್ಕೆ ನಕಾರಾತ್ಮಕವಾಗಿ ಎಂದು ಉತ್ತರಿಸಲಾಗಿದೆ.**

43. **<u>ವಿವಾದಾಂಶ 4:</u>** ಈ ದಾವೆಯಲ್ಲಿ ಪ್ರತಿವಾದಿ 10 ಮತ್ತು 11 ಮೃತ ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು ರುಜುವಾತುಪಡಿಸುವ ಹೊಣೆಗಾರಿಕೆ ಪ್ರತಿವಾದಿ 10 ಮತ್ತು 11 ರವರದೆ ಆಗಿರುತ್ತದೆ. ವಾದಿ ತಮ್ಮ ಸಾಕ್ಷ್ಯದಲ್ಲಿ ಮೃತ ನಿಂಗಪ್ಪರವರಿಗೆ ಹೆಂಡತಿ ಮತ್ತು ಮಗಳು ಈ ದಾವೆಯಲ್ಲಿ ಪ್ರತಿವಾದಿ 8 ಮತ್ತು 9 ರವರಾಗಿರುತ್ತಾರೆ ಎಂದು ತಮ್ಮ ಮುಖ್ಯ ವಿಚಾರಣೆ

ಕಾಲಕ್ಕೆ ಸಾಕ್ಷಿ ನುಡಿದಿರುತ್ತಾರೆ. ಪ್ರತಿವಾದಿ 10 ಮತ್ತು 11 ರವರ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಸದರಿ ಸಂಗತಿಗಳನು ಅಲ್ಲಗಳೆದಿರುತ್ತಾರೆ, ಈ ಹಂತದಲ್ಲಿ ನ್ಯಾಯಾಲಯವು ನಿಡಿ-10 ಮತ್ತು 11 ನ್ನು ಪರಿಶೀಲಿಸಿದಾಗ ಪ್ರತಿವಾದಿ 8 ರಿಂದ 11 ರವರು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲದಿಂದ ಆದೇಶ ಪಡೆದುಕೊಂಡ ಬಂದರೆ ಮಾತ್ರ ಪ್ರತಿವಾದಿ 10 ಮತ್ತು 11 ರವರು ಮೂಲಪುರುಷ ಮೃತ ನಿಂಗಪ್ಪನ ವಾರಸುದಾರರು ಎಂದು ಪರಿಗಣಿಸುವುದಾಗಿ ಕೆ.ಎಸ್.ಆರ್.ಟಿ.ಸಿ ಯವರು ತಿಳಿಸಿ ಅವರು ಘೋಷಣಾತ್ಮಕ ಆದೇಶ ಮಾಡಬೇಕೆಂದು ಪ್ರತಿವಾದಿ 8 ಮತ್ತು 9 ರವರು ಹಾಗೂ ಕೆ.ಎಸ್.ಆರ್.ಟಿ.ಸಿರವರ ವಿರುದ್ಧ ದಾವೆಯನ್ನು ಸಲ್ಲಿಸಿ ದಾವೆಯನ್ನು ಮಾಡಿದ್ದು, ಆ ದಾವೆಯಲ್ಲಿ ಪ್ರತಿವಾದಿ 8 ಮತ್ತು 9 ರವರ ವಿಚಾರಣೆ ಆಗಿರುವುದಿಲ್ಲ ಆದರೆ ಪ್ರತಿವಾದಿ 10 ಮತ್ತು 11 ರವರ ಸಾಕ್ಷ್ಯವನ್ನು ಗೌರವಾನ್ವಿತ ನ್ಯಾಯಾಲಯವು ಪರಿಗಣಿಸಿ ಮೃತ ನಿಂಗಪ್ಪನ ವಾರಸುದಾರರೆಂದು ನಿಡಿ-10 ಮತ್ತು 11 ದಾಖಲೆಗಳಂತೆ ಘೋಷಣೆಯನ್ನು ಮಾಡಿದ್ದು, ಅಸಲು ದಾವಾ ಸಂಖ್ಯೆ 07/2019 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಪ್ರತಿವಾದಿ 8 ಮತ್ತು 9 ರವರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎ ನಂ-101755/2020 ಎಂದು ಅಫೀಲು ಸಲ್ಲಿಸಿದ್ದು, ಸದರಿ ಅಫೀಲು ಚಾಲ್ತಿಯಲ್ಲಿರುತ್ತದೆ. ಈ ದಾವೆಯಲ್ಲಿ ವಿಚಾರಣೆಗೆ ಒಳಗಾಗಿ ವಾದಿ ಮತ್ತು ಪ್ರತಿವಾದಿ 4 ಹಾಗೂ ಪ್ರತಿವಾದಿ 8 ರವರು, ಪ್ರತಿವಾದಿ 10 ಮತ್ತು 11 ರವರು ನಿಂಗಪ್ಪನ ಹೆಂಡತಿ ಮತ್ತು ಮಗ ಅಲ್ಲವೆಂದು ಅಲ್ಲೆಗಳೆದಿರುತ್ತಾರೆ. ಅದರೆ ಈಗಾಗಲೇ ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ನಿಡಿ-10

ಮತ್ತು 11ರ ಪ್ರತಿವಾದಿ 10 ಮತ್ತು 11ರವರು ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು ಘೋಷಣಾತ್ಮಕ ಡಿಕ್ರಿಯಾಗಿರುವುದರಿಂದ ಸದರಿಯವರು ನಿಂಗಪ್ಪನ ವಾರಸುದಾರರಾಗಿರುತ್ತಾರೆ ಎಂದು ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ.

44. ಈ ದಾವೆಯಲ್ಲಿ ಪ್ರತಿವಾದಿ 10 ಮತ್ತು 11ರವರು ದಾವೆಯಲ್ಲಿ ಸಲ್ಲಿಸಿದ ಲಿಖಿತ ತಕರಾರು ಹಾಗೂ ಅವರ ಪರ ವಿಚಾರಣೆಗೆ ಒಳಗಾಗಿ ಪ್ರತಿವಾದಿ 11ರವರು ಸಾಕ್ಷ್ಯವನ್ನು ನ್ಯಾಯಾಲಯವು ಗಮನಿಸಿದಾಗ ಸದರಿ ನಿಂಗಪ್ಪನ ಹೆಂಡತಿ ಹೆಸರು ಶಾಂತವ್ವ ಎಂದು ಇದ್ದು, ಪ್ರತಿವಾದಿ 8 ಹಾಗೂ 10ರವರ ಹೆಸರು ಒಂದೇ ಇದ್ದು, ಪ್ರತಿವಾದಿ 8 ಮತ್ತು 9ರವರು ಮೃತ ನಿಂಗಪ್ಪನ ಹೆಂಡತಿ ಮತ್ತು ಮಗಳು ಆಗಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಹಂತದಲ್ಲಿ ನ್ಯಾಯಾಲಯವು ನಿಡಿ-1, 9 ಹಾಗೂ ನಿಪಿ-7 ಮತ್ತು 7(ಎ) ದಾಖಲೆಗಳನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ವಾದಿ ಶಿವಾನಂದಪ್ಪರೊಂದಿಗೆ ಆತನ ಸಹೋದರ ನಿಂಗಪ್ಪರವರ ಮದುವೆಯು ಒಂದೇ ದಿನಾಂಕ 25.06.1982ರಂದು ಶ್ರೀ ಕಂಠಿಬಸವೇಶ್ವರ ದೇವಸ್ಥಾನದಲ್ಲಿ ನೆರವೇರಿರುತ್ತದೆ ಎಂದು ಕಂಡು ಬಂದಿರುತ್ತದೆ. ಸದರಿ ಪ್ರತಿವಾದಿ 8 ಮತ್ತು 9ರವರು ಮೃತ ನಿಂಗಪ್ಪರವರ ಹೆಂಡತಿ ಮತ್ತು ಮಗಳು ಇರುತ್ತಾರೆ ಎಂದು ನ್ಯಾಯಾಲಯಕ್ಕೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಆದೇ ರೀತಿ ಪ್ರತಿವಾದಿ 10 ಮತ್ತು 11ರವರು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗದಗದಲ್ಲಿ ಅಸಲು ದಾವಾ ಸಂಖ್ಯೆ-07/2019 ಎಂದು ದಾವೆ ಸಲ್ಲಿಸಿ, ಸದರಿ ದಾವೆಯಲ್ಲಿ ವಿಚಾರಣೆಯಾಗಿ ನಿಡಿ-10 ಮತ್ತು 11ರಂತೆ ತೀರ್ಪು ಮತ್ತು ಡಿಕ್ರಿಯಾಗಿರುತ್ತದೆ. ಸದರಿಯವರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎ. ನಂ-

101780/2020 ಅಪೀಲು ಮಾಡಿದ್ದು, ಸದರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆದೇಶ ಪ್ರಕಾರ ನಿಂಗಪ್ಪನ ಹೆಂಡತಿ ಮತ್ತು ಮಗ ಆಗಿರುವುದರಿಂದ ಪ್ರತಿವಾದಿ 8 ರಿಂದ 11 ರವರು ನಿಂಗಪ್ಪನ ವಾರಸುದಾರರು ಎಂದು ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ಪ್ರತಿವಾದಿ 10 ಮತ್ತು 11 ರವರು ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ನಿಂಗಪ್ಪನ ವಾರಸುದಾರರು ಎಂದು ರುಜುವಾತುಪಡಿಸಿರುತ್ತಾರೆ. ಆದ್ದರಿಂದ **ವಿವಾದಾಂಶ 4 ಕ್ಕೆ ಸಕಾರಾತ್ಮಕವಾಗಿ ಎಂದು ಉತ್ತರಿಸಲಾಗಿದೆ.**

45. **<u>ವಿವಾದಾಂಶ 5:</u>** ವಾದಿಯು ಈ ದಾವೆಯನ್ನು ಪ್ರತಿವಾದಿ 1 ರಿಂದ 11 ರವರು ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದು ಪ್ರತಿವಾದ ತೆಗೆದುಕೊಂಡಿದ್ದು, ಮೂಲಪುರುಷ ಯಮನಪ್ಪರವರಿಗೆ 1) ವೀರಭದ್ರಪ್ಪ 2) ಶಿವಾನಂದಪ್ಪ 3) ನಿಂಗಪ್ಪ 4) ಬಾಳಮ್ಮ ಎನ್ನುವ 4 ಜನ ಮಕ್ಕಳು ಇದ್ದು, ಪ್ರತಿವಾದಿ 1 ರಿಂದ 7 ರವರು ಮೃತ ವೀರಭದ್ರಪ್ಪನ ವಾರಸುದಾರಾಗಿರುತ್ತಾರೆ, ಪ್ರತಿವಾದಿ 8 ರಿಂದ 11 ರವರು ಮೃತ ನಿಂಗಪ್ಪನ ವಾರಸುದಾರಾಗಿರುತ್ತಾರೆ, ಮೂಲಪುರುಷನ 4 ನೇ ಮಗಳು ಬಾಳಮ್ಮರವರು ಈ ದಾವೆಯಲ್ಲಿ 12 ನೇ ಪ್ರತಿವಾದಿಯಾಗಿರುತ್ತಾರೆ. ಈ ದಾವೆಯಲ್ಲಿ ಎಲ್ಲಾ ಅವಶ್ಯಕ ಪಕ್ಷಗಾರರು ಕಡತದ ಮೇಲೆ ಇರುತ್ತದೆ ಎಂದು ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ **ವಿವಾದಾಂಶ 5 ಕ್ಕೆ ಸಕಾರಾತ್ಮಕವಾಗಿ ಎಂದು ಉತ್ತರಿಸಲಾಗಿದೆ.**

46. **<u>ವಿವಾದಾಂಶ 7:</u>** ಪ್ರತಿವಾದಿ 1 ರಿಂದ 9 ರವರು ಈ ದಾವೆಯಲ್ಲಿ ವಾದಿಯು ದಿನಾಂಕ 06.07.1994 ರಂದು ತನ್ನ ಹೆಸರಿಗೆ ಖರೀದಿಸಿದ ಪ್ಲಾಟ ನಂ-

26 ಹಾಗೂ ಅರಹುಣಸಿ ಗ್ರಾಮದ ಸರ್ವೆ ನಂ-145 ರ ವಿಸ್ತೀರ್ಣ 7 ಎಕರೆ 9 ಗುಂಟೆ ಜಮೀನು ಮೂಲಪುರುಷ ಯಮನಪ್ಪರವರ ಸಹೋದರರ ಪಿತ್ರಾರ್ಜಿತವಾಗಿ ಆಸ್ತಿಯಾಗಿದ್ದು, ಅವುಗಳಲ್ಲಿ ತಮ್ಮ ಹಿಸ್ಸಾ ಇರುತ್ತದೆ ಎಂದು ದಾವೆ ಮಾಡಿರುತ್ತಾರೆ. ಆದರೆ ನಿಪಿ-3 ಮತ್ತು 7 ದಾಖಲೆಗಳ ಪ್ರಕಾರ ಮೂಲಪುರುಷ ಯಮನಪ್ಪರವರಿಗೆ ದಾವಾ ಬಿ ಶೆಡ್ಯೂಲ್ ಆಸ್ತಿ ಮಾತ್ರ ಪಿತ್ರಾರ್ಜಿತವಾಗಿ ಬಂದಿದ್ದು, ಈಗಾಗಲೇ ವಾದಿ ಹಾಜರುಪಡಿಸಿರುವ ನಿಪಿ-8 ರಿಂದ 11 ದಾಖಲೆಗಳು ಹಾಜರುಪಡಿಸಿ ವಾದಿಯು ಕೆ.ಎಸ್.ಆರ್.ಟಿ.ಸಿ ಯಲ್ಲಿ ನೌಕರಿ ಇದ್ದು, ಮೃತ ವೀರಭದ್ರಪ್ಪ ಹೆಸರಿಗೆ ದಾವಾ ಎ ಶೆಡ್ಯೂಲ್ ಅಸ್ತಿಯನ್ನು ಖರೀದಿಯಾದ ದಿನಾಂಕದಂದು ವಾದಿಯು ತನ್ನ ಹೆಸರಿಗೆ ನಿಪಿ-12 ದಾಖಲೆಯಂತೆ ಆಸ್ತಿಯನ್ನು ಖರೀದಿಸಿರುತ್ತಾರೆ, ಸದರಿ ಆಸ್ತಿಯು ಆತನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ಎರಡು ಆಸ್ತಿಗಳು ಪ್ರತಿವಾದಿ 1 ರಿಂದ 8 ರವರು ತಮ್ಮ ವಿಚಾರಣೆ ಕಾಲಕ್ಕೆ ಒಪ್ಪಿಕೊಂಡ ಸಂಗತಿಗಳ ಪ್ರಕಾರ ಈ ಆಸ್ತಿಯು ವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಹಾಗೂ ಸರ್ವೆ ನಂ-145 ಮೂಲಪುರುಷ ಯಮನುಪ್ಪನ ಸಹೋದರರ ವಿಭಾಗದಿಂದ ಬಂದ ಆಸ್ತಿಯಾಗಿರುತ್ತದೆ ಎಂದು ಈ ಆಸ್ತಿಯಲ್ಲಿ ಭಾಗಾಂಶ ಬೇಕೆಂದು ಪ್ರತಿವಾದಿ 1 ರಿಂದ 7 ರವರು ಎದುರು ದಾವೆ ಮಾಡಿದ್ದು, ಸದರಿ ಸಂಗತಿಗಳನ್ನು ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ರುಜುವಾತುಪಡಿಸಿರುವುದಿಲ್ಲ. ಆದ್ದರಿಂದ **ವಿವಾದಾಂಶ 7 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

47. **<u>ವಿವಾದಾಂಶ 6:</u>** ವಾದಿಗಳು ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಜಂಟೀ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ತಮ್ಮ ಮೌಖಿಕ

ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ರುಜುವಾತುಪಡಿಸಿರುತ್ತಾರೆ. ಆದ್ದರಿಂದ ವಾದಿಯು ದಾವೆಯಲ್ಲಿ ಕೋರಿದಂತೆ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರಿರುವುದಿಲ್ಲ. **ಆದ್ದರಿಂದ ವಿವಾದಾಂಶ 6 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

48. **<u>ವಿವಾದಾಂಶ 8:-</u>** ಈ ಮೇಲಿನ ವಿವಾದಾಂಶ 1 ರಿಂದ 7 ರಲ್ಲಿ ಚರ್ಚಿಸಲಾದಂತೆ ಮಾಡಲಾದ ಆದೇಶ:-

**::ಆದೇಶ::**

- ವಾದಿಯ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿದೆ.
- ಪ್ರತಿವಾದಿಗಳ ಎದುರುದಾವೆಗಳನ್ನು ವಜಾಗೊಳಿಸಲಾಗಿದೆ.
- ವಾದಿಯು ದಾವಾ ಆಸ್ತಿಗಳಲ್ಲಿ ¼ ಭಾಗಾಂಶ ಪಡೆದುಕೊಳ್ಳಲು ಅರ್ಹರಿರುತ್ತಾರೆ.
- ಪ್ರತಿವಾದಿ 1 ರಿಂದ 7 ರವರು ದಾವಾ ಆಸ್ತಿಗಳಲ್ಲಿ ಜಂಟೀಯಾಗಿ ¼ ಭಾಗಾಂಶ ಪಡೆದುಕೊಳ್ಳಲು ಅರ್ಹರಿರುತ್ತಾರೆ.
- ಪ್ರತಿವಾದಿ 8 ಮತ್ತು 9, 11 ರವರು ದಾವಾ ಆಸ್ತಿಗಳಲ್ಲಿ ಜಂಟೀಯಾಗಿ ¼ ಭಾಗಾಂಶ ಪಡೆದುಕೊಳ್ಳಲು ಅರ್ಹರಿರುತ್ತಾರೆ.
- ಪ್ರತಿವಾದಿ 12 ರವರು ದಾವಾ ಆಸ್ತಿಗಳಲ್ಲಿ ¼ ಭಾಗಾಂಶ ಪಡೆದುಕೊಳ್ಳಲು ಅರ್ಹರಿರುತ್ತಾರೆ.
- ಪ್ರತಿವಾದಿಗಳು ತಮ್ಮ ಪಾಲಿನ ಹಿಸ್ಸೆಗೆ ಸಂಬಂಧಪಟ್ಟಂತೆ ನ್ಯಾಯಾಲಯದ ಶುಲ್ಕವನ್ನು ಪಾವತಿಸತಕ್ಕದ್ದೆಂದು ನಿರ್ದೇಶಿಸಲಾಗಿದೆ.

- ಅಪೀಲಿನ ಅವಧಿಯು ಮುಗಿದ ನಂತರ ಕಛೇರಿಯು ಸ್ವತಃ ಎಫ್.ಡಿ.ಪಿ. ಅರ್ಜಿಯನ್ನು ದಾಖಲಿಸತಕ್ಕದ್ದೆಂದು ನಿರ್ದೇಶಿಸಲಾಗಿದೆ.
- ಕಛೇರಿಯು ಆ ಪ್ರಕಾರವಾಗಿ ಡಿಕ್ರಿ ಬರೆಯತಕ್ಕದ್ದೆಂದು ನಿರ್ದೇಶಿಸಲಾಗಿದೆ.

**(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿಸಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 17/06/2026 ರಂದು ಘೋಷಿಸಲಾಯಿತು.)**

MAHADEVAPPA H

Digitally signed by MAHADEVAPPA H
Date: 2026.06.25 15:41:07 +0530

**(ಮಹದೇವಪ್ಪ.ಹೆಚ್.)**
**ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ**

## ::ಅನುಬಂಧಗಳು::

**I ವಾದಿಯ/ರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರುಃ**

ಪಿ.ಡಬ್ಲ್ಯೂ.1: ಶಿವಾನಂದಪ್ಪ ತಂದೆ ಯಮನಪ್ಪ ಕುರಿ,

**II ವಾದಿಯ/ರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳುಃ**

| | |
|---|---|
| ನಿಪಿ.1 | : ಪಹಣಿ ಪತ್ರಿಕೆ |
| ನಿಪಿ.2 | : ದಿಃ 06.07.1994 ರ ಕ್ರಯಪತ್ರದ ದೃಢೀಕೃತ ನಕಲು |
| ನಿಪಿ.3 | : ಎಂ.ಆರ್.ನಂ-2142 ರ ದೃಢೀಕೃತ ನಕಲು ಪ್ರತಿ |
| ನಿಪಿ.4 | : ಎಂ.ಆರ್.ನಂ-1605 ರ ದೃಢೀಕೃತ ನಕಲು ಪ್ರತಿ |
| ನಿಪಿ.5 | : ನಿಂಗಪ್ಪರವರ ಮರಣ ಪ್ರಮಾಣ ಪತ್ರ |
| ನಿಪಿ.6 | : ಶಿವಾನಂದಪ್ಪ ಕುರಿರವರ ಆಧಾರ ಕಾರ್ಡ್ |
| ನಿಪಿ.7 | : ಶಿಥಿಲವಾಗಿರುವ ಲಗ್ನಪತ್ರಿಕೆ |
| ನಿಪಿ.7(ಎ) | : ಲಗ್ನಪತ್ರಿಕೆ ನಕಲು ಪ್ರತಿ |
| ನಿಪಿ.8 ರಿಂದ 11 | : 4 ವೇತನ ರಸೀದಿಗಳು |
| ನಿಪಿ.12 | : ದಿಃ 06.07.1990 ರ ಮೂಲ ಕ್ರಯಪತ್ರ |

ನಿಪಿ.13 ಮತ್ತು 14 : ಉತಾರಗಳು

ನಿಪಿ.15 : ಋಣಭಾರ ಪ್ರಮಾಣ ಪತ್ರ (ನಮೂನೆ-15)

III **<u>ಪ್ರತಿವಾದಿಯ/ರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರುಃ</u>**

ಡಿ.ಡಬ್ಲ್ಯೂ .1: ಯಮನಪ್ಪ ತಂದೆ ವೀರಭದ್ರಪ್ಪ ಕುರಿ (ತಿರಸ್ಕರಿಸಲಾಗಿದೆ)

ಡಿ.ಡಬ್ಲ್ಯೂ.2: ಶಾಂತಿವ್ವ ಕೋಂ ನಿಂಗಪ್ಪ ಕುರಿ

ಡಿ.ಡಬ್ಲ್ಯೂ.3: ಆನಂದ ತಂದೆ ನಿಂಗಪ್ಪ ಕುರಿ

IV **<u>ಪ್ರತಿವಾದಿಯರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳುಃ</u>**

ನಿಡಿ.1 : ಫೋಟೋ

ನಿಡಿ.2 : ದಿನಾಂಕ 06.07.1994 ರ ಮೂಲ ಕ್ರಯಪತ್ರ

ನಿಡಿ.3 : ದಿನಾಂಕ 06.07.1994 ರ ಕ್ರಯ ಪತ್ರದ ದೃಢೀಕೃತ ನಕಲು

ನಿಡಿ.4 : ಪ್ರಹಣಿ ಪತ್ರಿಕೆ

ನಿಡಿ.5 : ದಿನಾಂಕ 18.06.2020 ರ ಕ್ರಯಪತ್ರದ ದೃಢೀಕೃತ ನಕಲು

ನಿಡಿ.6 : ಉತಾರದ ದೃಢೀಕೃತ ನಕಲು

ನಿಡಿ.7 : ಎಂ.ಆರ್. ನಂ-1605 ರ ದೃಢೀಕೃತ ನಕಲು

ನಿಡಿ.8 : ಅಸೆಸ್ಸಮೆಂಟಿನ ದೃಢೀಕೃತ ನಕಲು

ನಿಡಿ.9 : ಲಗ್ನ ಪತ್ರಿಕೆ

ನಿಡಿ.10 & 11: ಅಸಲು ದಾವಾ ಸಂಖ್ಯೆ-07/2019 ರ ತೀರ್ಪು ಮತ್ತು
ಡಿಕ್ರಿಯ ದೃಢೀಕೃತ ನಕಲುಗಳು

MAHADEVAPPA H
Digitally signed by MAHADEVAPPA H
Date: 2026.06.25 15:41:19 +0530

**ಹಿರಿಯ ದಿವಾಣಿ ನ್ಯಾಯಾಧೀಶರು,**
**ರೋಣ**